# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಜುಲೈ 17, 2024

ಸಂಪುಟ : 51 ಸಂಚಿಕೆ : 64 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







**ಮಳೆ.. ಜಿಟಿಜಿಟಿ ಮಳೆ...!**

ದಾವಣಗೆರೆಯಲ್ಲಿ ಮೂರ್ನಾಲ್ಕು ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ಸೋಮವಾರ ಛತ್ರಿ ಆಸರೆ ಬಳಸಿ ವಿದ್ಯಾರ್ಥಿಗಳು ಶಾಲೆಯತ್ತ ಹೆಜ್ಜೆ ಹಾಕಿದರು. ಮತ್ತೊಂದೆಡೆ ಮಳೆಯಿಂದ ರಕ್ಷಿಸಿಕೊಳ್ಳಲು ರೇನ್ ಕೋಟ್‌ಗಳ ಖರೀದಿಯೂ ಜೋರಾಗಿ ನಡೆಯಿತು.

# ನಾಲೆಗಳಿಗೆ ಪಂಪ್‌ಸೆಟ್ ಅಳವಡಿಕೆಗೆ ತಡೆ

## ವಾರದಲ್ಲೇ ವಿಧೇಯಕ: ಡಿ.ಕೆ. ಶಿವಕುಮಾರ್

ಬೆಂಗಳೂರು, ಜು. 16 - ಜಲಾಶಯಗಳಿಂದ ರೈತರ ಜಮೀನಿಗೆ ನೀರು ಪೂರೈಸುವ ನಾಲೆಗಳಲ್ಲಿ ಕೊನೆ ಹಂತದವರೆಗೂ ನೀರು ತಲುಪಬೇಕು. ನಾಲೆಯ ಮಧ್ಯದಲ್ಲಿ ರೈತರು ಪಂಪ್ ಸೆಟ್ ಅಳವಡಿಸಿ ನೀರೆತ್ತುವುದನ್ನು ತಪ್ಪಿಸಲು ಇನ್ನೊಂದು ವಾರದಲ್ಲಿ ವಿಧೇಯಕವನ್ನು ಸದನದಲ್ಲಿ ಮಂಡಿಸಲಾಗುವುದು ಎಂದು ಜಲಸಂಪನ್ಮೂಲ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಗಿಂದು ತಿಳಿಸಿದ್ದಾರೆ.



ಜಗದೀಶ ಶಿವಯ್ಯ ಗುಡಗುಂಟಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಉಪಮುಖ್ಯಮಂತ್ರಿ, ಮಂಡ್ಯ, ಹಾಸನ, ಬಿಜಾಪುರ, ಬಾಗಲಕೋಟೆ ಸೇರಿದಂತೆ ನೀರಾವರಿ ಪ್ರದೇಶಗಳಲ್ಲಿ ನಾಲೆ ಕೊನೆಯವರೆಗೂ ನೀರು ತಲುಪವುದಿಲ್ಲ. ಮಧ್ಯದಲ್ಲೇ ಪಂಪ್‌ಸೆಟ್‌ಗಳ ಮೂಲಕ ನೀರು ಎತ್ತಲಾಗುತ್ತಿದೆ, ಇದನ್ನು ತಪ್ಪಿಸಲು ವಿಧೇಯಕವನ್ನು ತರಲಾಗುವುದು. ಇದರ ಬಗ್ಗೆ ವ್ಯಾಪಕ ಚರ್ಚೆಗೆ ಅನುಮತಿ ಕೊಡಿ ಎಂದರು.

ಎತ್ತಿನಹೊಳೆ ಯೋಜನೆಗೆ 25 ಸಾವಿರ ಕೋಟಿ ರೂ. ವೆಚ್ಚವಾಗಿದೆ, ಆದರೂ, ನೀರು ತುಮಕೂರಿಗೂ ತಲುಪಲಾಗದ ಸ್ಥಿತಿ ಇದೆ ಎಂದು ಹೇಳಿದರು. ತುಂಗಳ-ಸಾವಳಗಿ ಏತ ನೀರಾವರಿ ಯೋಜನೆಗೆ ಹಲ್ಯಾಳ ಏತ ನೀರಾವರಿ ಯೋಜನೆಯ 150 ಕ್ಯೂಸೆಕ್ ನೀರನ್ನು ಪಂಪ್ ಮಾಡುವ ಮೂಲಕ 9,045 ಹೆಕ್ಟೇರ್‌ಗೆ ನೀರು ಒದಗಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಸಿ.ಸಿ. ಪಾಟೀಲ್, ನಾಲೆಯ ಕೊನೆಯ ಹಂತದವರೆಗೂ ನೀರು ಹರಿದುಹೋಗಲು ವಿಧೇಯಕ ತಂದರೆ ಸಂಪೂರ್ಣ ಬೆಂಬಲವಿದೆ ಎಂದರು.

ಸುರೇಶ ಬಾಬು ಮಾತನಾಡಿ, ನಾಲೆಗಳ ಮಧ್ಯದಲ್ಲಿ ನೀರೆತ್ತುವುದನ್ನು ತಡೆಯಲು ವಿಧೇಯಕ ತರಲಾಗುವುದು ಎನ್ನುತ್ತೀರಿ. ಆದರೆ ಗುಬ್ಬಿಯಿಂದ ಕುಣಿಗಲ್‌ಗೆ ನಾಲಾ ಮಧ್ಯದಿಂದಲೇ ನೀರು ತೆಗೆದುಕೊಂಡು ಹೋಗಿದ್ದೀರಿ ಎಂದಾಗ ಉಪಮುಖ್ಯಮಂತ್ರಿ ಹಾಗೂ ಎಚ್.ಸಿ.ಬಾಲಕೃಷ್ಣ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಹೆಚ್.ಡಿ.ತಮ್ಮಯ್ಯ ಪ್ರಸ್ತಾವಕ್ಕೆ ಉತ್ತರಿಸಿದ ಉಪ ಮುಖ್ಯಮಂತ್ರಿ, ಭದ್ರ ಉಪಜಲಾನಯನ ಪ್ರದೇಶದಿಂದ ಏತ ವ್ಯವಸ್ಥೆ ಮೂಲಕ 197 ಕೆರೆಗಳಿಗೆ (2ನೇ ಪುಟಕ್ಕೆ)

# ಪ್ರಜ್ವಲ್ ತಪ್ಪು ಮಾಡಿದ್ದರೆ ಗಲ್ಲಿಗೇರಿಸಿ

## ಸದನದಲ್ಲಿ ಕಣ್ಣೀರು ಹಾಕಿದ ಮಾಜಿ ಸಚಿವ ಹೆಚ್.ಡಿ. ರೇವಣ್ಣ

ಬೆಂಗಳೂರು, ಜು. 16 - ಮಾಜಿ ಸಂಸದ ಪ್ರಜ್ವಲ್ ತಪ್ಪು ಮಾಡಿದ್ದರೆ ಗಲ್ಲಿಗೇರಿಸಿ ಎಂದು ಅವರ ತಂದೆ ಹೆಚ್.ಡಿ.ರೇವಣ್ಣ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದರು.

ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡುವಾಗ, ಪ್ರಜ್ವಲ್ ರೇವಣ್ಣ ಪ್ರಕರಣವನ್ನೂ ಪ್ರಸ್ತಾಪಿಸಿದರು.

ಈ ಅವಕಾಶವನ್ನು ಬಳಕೆ ಮಾಡಿಕೊಂಡ ರೇವಣ್ಣ, ಸಭಾಧ್ಯಕ್ಷರ ಅನುಮತಿ ಪಡೆದು ಮಾತನಾಡಿದರು.

ನನಗೆ ಕಾಂಗ್ರೆಸ್ ಶಾಸಕರಂತೆ ವಾದ ಮಾಡುವ ಶಕ್ತಿ ಇಲ್ಲ, ನನ್ನ ಮಗ ತಪ್ಪು ಮಾಡಿದ್ದರೆ ಗಲ್ಲಿಗೆ ಹಾಕಿ. ನಾನು ಯಾರ ಪರವಾಗಿಯೂ ಮಾತನಾಡುತ್ತಿಲ್ಲ ಎಂದರು.

ಕಳೆದ ನಾಲ್ಕು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ, 25 ವರ್ಷಗಳಿಂದ ಶಾಸಕನಾಗಿ ಕೆಲಸ ಮಾಡಿದ್ದೇನೆ. ನನ್ನ ವಿರುದ್ಧ ಹೆಣ್ಣು ಮಗಳೊಬ್ಬಳನ್ನು ಪೊಲೀಸ್ ಮಹಾನಿರ್ದೇಶಕರು ಕಚೇರಿಗೆ ಕರೆಸಿಕೊಂಡು ನನ್ನ ವಿರುದ್ಧ ದೂರು ಬರೆಸಿಕೊಂಡಿದ್ದಾರೆ. ಇಂತಹ ವ್ಯಕ್ತಿ



ಪೊಲೀಸ್ ಮಹಾನಿರ್ದೇಶಕನಾಗಲು ಅನರ್ಹ. ಮೂರೂ ಬಿಟ್ಟ ಈ ನೀತಿಗೆಟ್ಟ ಸರ್ಕಾರಕ್ಕೆ ನಾಚಿಕೆಯಾಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂಬಂಧ ನಾನು ಪ್ರತ್ಯೇಕ ನೋಟಿಸ್ ಕೊಡುತ್ತೇನೆ, ಸವಿಸ್ತಾರ ಚರ್ಚೆಯಾಗಲಿ, ಎಲ್ಲವನ್ನೂ ಬಯಲು ಮಾಡುತ್ತೇನೆ ಎಂದು ಗುಡುಗಿದರು.

ಇದಕ್ಕೂ ಮುನ್ನ ಅಶೋಕ್ ಮಾತನಾಡುತ್ತಾ, ಎಸ್‌ಐಟಿ ತನಿಖಾ ಸಂಸ್ಥೆಗಳು ಯಾವ ರೀತಿ ತಾರತಮ್ಯ ಮಾಡುತ್ತಿವೆ ಎಂದು ವಿವರಿಸುವ ವೇಗದಲ್ಲಿ, ಪ್ರಜ್ವಲ್ ರೇವಣ್ಣ ಆರೋಪಿ ಎಂದು ಹೇಳಿದ ಮಾತು ಚರ್ಚೆಗೆ ಗ್ರಾಸವಾಯಿತು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ತನಿಖೆ ನಡೆಸುತ್ತಿರುವ ಎಸ್‌ಐಟಿ ತಂಡ ಎಫ್‌ಐಆರ್ ದಾಖಲಾಗಿ 40 ದಿನಗಳಾದರೂ ಮಾಜಿ ಸಚಿವ ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರನ್ನು ವಿಚಾರಣೆಗೆ ಕರೆಯುವುದಿಲ್ಲ. ಆದರೆ, ರೇವಣ್ಣನ ಮಗ ಮಾಡಿದ ತಪ್ಪಿಗೆ ರೇವಣ್ಣ ಅವರನ್ನು ಕರೆಸಿ ಜೈಲಿಗೆ ಹಾಕಲಾಯಿತು ಎಂದರು.

ಬೆಂಗಳೂರು, ಹಾಸನ, ಹೊಳೆನರಸೀಪುರದಲ್ಲಿರುವ ರೇವಣ್ಣ ಅವರ ಮನೆಗೆ ತಲಾ 20 ಮಂದಿ ಪೊಲೀಸರ ತಂಡಗಳನ್ನು ನಿಯೋಜಿಸಲಾಗಿತ್ತು. ರೇವಣ್ಣ ಅವರ ಪತ್ನಿ ಭವಾನಿ ಅವರ ಬಂಧನಕ್ಕೂ ಪ್ರಯತ್ನಿಸಲಾಯಿತು. ಅವರು ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಪಡೆದುಕೊಂಡರು. ನಮ್ಮ ಪಕ್ಷದ ಮಾಜಿ ಶಾಸಕ ಪ್ರೀತಂಗೌಡ ಅವರನ್ನು ಬಂಧಿಸುವ ಯತ್ನಗಳಾದವು. ಎಸ್‌ಐಟಿ ಅಧಿಕಾರಿಗಳ ಈ ತಾರತಮ್ಯ ಏಕೆ? ಎಂದರು.

ಕೂಡಲೇ ಮಧ್ಯ ಪ್ರವೇಶಿಸಿ ಮಾತನಾಡಿದ ಹೆಚ್.ಡಿ.ರೇವಣ್ಣ, ವಿರೋಧ ಪಕ್ಷದ ನಾಯಕರು ನನ್ನ ಹೆಸರನ್ನು ಪ್ರಸ್ತಾಪಿಸಿದ್ದಾರೆ, ಸ್ಪಷ್ಟನೆ ನೀಡಲು ನನಗೆ ಅವಕಾಶ ಕೊಡಬೇಕು (2ನೇ ಪುಟಕ್ಕೆ)


# ಮೀಸಲಾತಿ ವಿರೋಧಿಸಿ ವಿದ್ಯಾರ್ಥಿಗಳ ಪ್ರತಿಭಟನೆ

**ನಾಲ್ವರ ಸಾವು**

ಢಾಕಾ, ಜು. 16 - ಬಾಂಗ್ಲಾದೇಶದ ರಾಜಧಾನಿ ಢಾಕಾದ ಹೊರ ವಲಯದಲ್ಲಿರುವ ವಿಶ್ವವಿದ್ಯಾಲಯದಲ್ಲಿ ಮೀಸಲಾತಿ ವಿರೋಧಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದಾಗ ಸಂಘರ್ಷ ಉಂಟಾಗಿ ನಾಲ್ವರು ಸಾವನ್ನಪ್ಪಿದ್ದಾರೆ ಹಾಗೂ ಹಲವರು ಗಾಯಗೊಂಡಿದ್ದಾರೆ. ಜಹಂಗೀರ್ ನಗರ ವಿಶ್ವವಿದ್ಯಾಲಯದ ಬಳಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು. 1971ರ (2ನೇ ಪುಟಕ್ಕೆ)

# ಏರಿದ ಟೊಮ್ಯಾಟೋ ಬೆಲೆ : ಹೈಬ್ರಿಡ್ ತಳಿ ಮೇಲೆ ಕಣ್ಣು

ನವದೆಹಲಿ, ಜು. 16 - ದೇಶದ ಹಲವೆಡೆ ಟೊಮ್ಯಾಟೋ ದರ ಕೆಜಿಗೆ 80 ರೂ.ಗಳವರೆಗೆ ತಲುಪಿದೆ. ಇದು ಬೆಂಗಳೂರಿನ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐ.ಸಿ.ಎ.ಆರ್.) ಅಭಿವೃದ್ಧಿ ಪಡಿಸಿರುವ ಎರಡು ಹೈಬ್ರಿಡ್ ತಳಿಗಳ ಕಡೆ ಗಮನ ಹರಿಯುವಂತೆ ಮಾಡಿದೆ ಎಂದು ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.



ಆದರೆ, ಈ ತಳಿಗಳ ವ್ಯಾಪಕ ಅಳವಡಿಕೆ ಹಾಗೂ ಹೆಚ್ಚಿನ ಇಳುವರಿ ಆಧಾರದ ಮೇಲೆ ಟೊಮ್ಯಾಟೋ ಬೆಲೆ ಸ್ಥಿರವಾಗುವುದು ಅವಲಂಬಿಸಿದೆ ಎಂದವರು ಹೇಳಿದ್ದಾರೆ.

ಅರ್ಕ ರಕ್ಷಕ್ ಹಾಗೂ ಅರ್ಕ ಅಬೇಧ್ ತಳಿಗಳನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರ್ ರೀಸರ್ಚ್ (ಐಐಹೆಚ್‌ಆರ್) ಅಭಿವೃದ್ಧಿ ಪಡಿಸಿದೆ. ಸಾಂಪ್ರದಾಯಿಕ ಟೊಮ್ಯಾಟೋ 7ರಿಂದ 10 ದಿನಗಳ ಕಾಲ ಮಾತ್ರ ಚೆನ್ನಾಗಿರುತ್ತದೆ. ಹೊಸ ಹೈಬ್ರಿಡ್ ತಳಿಯ ಟೊಮ್ಯಾಟೋಗಳು ಮೂರು ವಾರಗಳವರೆಗೂ ಚೆನ್ನಾಗಿರುತ್ತವೆ. ಇದು ಭಾರೀ ಮಳೆ ಹಾಗೂ ಮಳೆ ಕೊರತೆಯಂತಹ ಪರಿಸ್ಥಿತಿಯಲ್ಲೂ ಟೊಮ್ಯಾಟೋ ಪೂರೈಕೆ ನಿರಂತರವಾಗಿರುವಂತೆ ನೋಡಿಕೊಳ್ಳುವಲ್ಲಿ ನೆರವಾಗುತ್ತವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಾವು ಮೂರು ವಾರ ಕಾಲ ಬಾಳಿಕೆ ಬರುವ ಟೊಮ್ಯಾಟೋ ತಳಿಗಳನ್ನು ಅಭಿವೃದ್ಧಿ ಪಡಿಸಿದ್ದೇವೆ. ಈ ತಳಿಗಳ ಬಿತ್ತನೆ ಹೆಚ್ಚಿಸಬೇಕಿದೆ ಎಂದು ಐ.ಸಿ.ಎ.ಆರ್. ಪ್ರಧಾನ ನಿರ್ದೇಶಕ ಹಿಮಾಂಶು ಪಾಠಕ್ ಪತ್ರಕರ್ತರೊಂದಿಗೆ ಮಾತನಾಡುತ್ತಾ ಹೇಳಿದ್ದಾರೆ.

ಪರಿಸರ ವೈಪರೀತ್ಯಗಳ ಕಾರಣದಿಂದ ಟೊಮ್ಯಾಟೋ, ಆಲೂಗಡ್ಡೆ ಹಾಗೂ ಈರುಳ್ಳಿಗಳ ಮೇಲೆ ಪರಿಣಾಮವಾಗುತ್ತಿದೆ. ಹೀಗಾಗಿ ಹೆಚ್ಚು ಕಾಲ ಬಾಳಿಕೆ ಬರುವಂತಹ ತಳಿಗಳನ್ನು ಅಭಿವೃದ್ಧಿ ಪಡಿಸಲು ಆದ್ಯತೆ ನೀಡುತ್ತಿದ್ದೇವೆ ಎಂದು ಪಾಠಕ್ ಹೇಳಿದ್ದಾರೆ.

ಅರ್ಕ ರಕ್ಷಕ್ ತಳಿಯನ್ನು 2012ರಲ್ಲಿ ಅಭಿವೃದ್ಧಿ ಪಡಿಸಲಾಗಿತ್ತು. ಪ್ರಸಕ್ತ 7 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ ಎಂದು ಐ.ಐ.ಹೆಚ್.ಆರ್. ಹಿರಿಯ ವಿಜ್ಞಾನಿ ಸಿ. ಚಂದ್ರಶೇಖರ್ ಹೇಳಿದ್ದಾರೆ. (2ನೇ ಪುಟಕ್ಕೆ)

# 6 ತಾಸಿನೊಳಗೆ ಕೊಲೆ ಆರೋಪಿ ಬಂಧನಕ್ಕೆ ನೆರವಾದ ತುಂಗಾ-2

ದಾವಣಗೆರೆ, ಜು. 16- ಕೊಲೆ ನಡೆದ ಆರು ತಾಸಿನಲ್ಲಿಯೇ ಕೊಲೆ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಧಾರಾಕಾರ ಮಳೆಯಲ್ಲಿಯೂ ಪೊಲೀಸ್ ಶ್ವಾನ ತುಂಗಾ-2 ಆರೋಪಿ ಬಂಧನದಲ್ಲಿ ಪ್ರಮುಖ ಪಾತ್ರ ವಹಿಸಿದೆ.



ಜು.15ರ ರಾತ್ರಿ 9.30 ಗಂಟೆ ಸುಮಾರಿಗೆ ಸಂತೇಬೆನ್ನೂರು ಗ್ರಾಮದ ಸಂತೇಬೆನ್ನೂರು-ದಾವಣಗೆರೆ ಮುಖ್ಯರಸ್ತೆಯ ಹಿಂದುಸ್ಥಾನ್ ಪೆಟ್ರೋಲಿಯಂ ಪಂಪ್ ಎದುರಿನ ರಸ್ತೆಯಲ್ಲಿ ಸಂತೇಬೆನ್ನೂರು ಗ್ರಾಮದ ಸಂತೋಷ (36) ಎಂಬಾತನನ್ನು ದುಷ್ಕರ್ಮಿಗಳು ಮಚ್ಚಿನಿಂದ ಬರ್ಬರವಾಗಿ ಹಲ್ಲೆ ಮಾಡಿದ್ದರು.

ಘಟನೆ ನಡೆದ ಕೆಲವೇ ಕ್ಷಣದಲ್ಲಿ ಹೆದ್ದಾರಿ ಗಸ್ತು ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿಗಳು ಕೊಲೆ ನಡೆದ ಸ್ಥಳಕ್ಕೆ ಆಗಮಿಸಿದ್ದರು. ಕೊಲೆ ಆರೋಪಿ ಪತ್ತೆಗಾಗಿ ಕಾರ್ಯಪ್ರವೃತ್ತರಾದ ಪೊಲೀಸರು ಚನ್ನಗಿರಿ ತಾಲ್ಲೂಕು ಚನ್ನಾಪುರ ಗ್ರಾಮದ ಶ್ರೀರಂಗಸ್ವಾಮಿ (32) ಎಂಬಾತನನ್ನು ಬಂಧಿಸಿದ್ದಾರೆ.

ತನ್ನ ಹೆಂಡತಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದರಿಂದ ಕೋಪಗೊಂಡು ಸಂತೋಷನನ್ನು ಕೊಲೆ ಮಾಡಿರುವುದಾಗಿ ತಿಳಿದು ಬಂದಿದ್ದು, ನಂತರ ತನ್ನ ಪತ್ನಿಯ ಕೊಲೆಗೂ ಸಂಚು ನಡೆಸಿದ ವಿಷಯ ಬೆಳಕಿಗೆ ಬಂದಿದೆ. ಇದೀಗ ಆರೋಪಿ ಬಂಧನದಿಂದಾಗಿ ಮತ್ತೊಂದು ಕೊಲೆ ತಡೆದಂತಾಗಿದೆ.

ಆರೋಪಿ ಪತ್ತೆಗೆ ಶ್ರಮಿಸಿದ ಸಂತೇಬೆನ್ನೂರು ವೃತ್ತ ನಿರೀಕ್ಷಕ ಲಿಂಗನಗೌಡ ನೆಗಳೂರು, ಸಂತೇಬೆನ್ನೂರು ಠಾಣೆ ಪಿ.ಎಸ್.ಐ ಶ್ರೀಮತಿ ರೂಪಾ ತೆಂಬದ್ ಹಾಗೂ ಚನ್ನವೀರಪ್ಪ ಹಾಗೂ ಸಿಬ್ಬಂದಿಗಳಾದ ರವಿ, ರಾಘವೇಂದ್ರ, ಕಣ್ಣಪ್ಪ, ಕುಮಾರ ನಾಯ್ಕ, ನಾಗಭೂಷಣ, ಸತೀಶ ಜಿ.ಆರ್, ರುದ್ರೇಶ್ ಎಂ., ಪರಶುರಾಮ ಚಾಲಕರುಗಳಾದ ರಘು, ರವಿ, ಸೋಮಶೇಖರ್, ಶ್ವಾನ ದಳದ ಶಫಿವುಲ್ಲಾ ಎಂ.ಡಿ, ದರ್ಗಾನಾಯ್ಕ ಇವರುಗಳ ಕಾರ್ಯವನ್ನು ಹಿರಿಯ ಅಧಿಕಾರಿಗಳು ಶ್ಲಾಘಿಸಿದ್ದಾರೆ.

# 7ನೇ ವೇತನ ಆಯೋಗದ ಶಿಫಾರಸ್ಸು ಜು.1ರಿಂದಲೇ ಪೂರ್ವಾನ್ವಯ: ಸಿಎಂ

ಬೆಂಗಳೂರು, ಜು. 16 - ಸರ್ಕಾರಿ ನೌಕರರಿಗೆ ಜುಲೈ 1ರಿಂದ ಪೂರ್ವಾನ್ವಯವಾಗುವಂತೆ 7ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಪ್ರಕಟಿಸಿದರು.



ನಿನ್ನೆ ರಾತ್ರಿ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಸಭಾಧ್ಯಕ್ಷರ ಅನುಮತಿ ಪಡೆದು, ಸ್ವಯಂ ಹೇಳಿಕೆ ನೀಡಿದ ಮುಖ್ಯಮಂತ್ರಿ ಅವರು, ಹೆಚ್ಚಳದ ವೇತನ ಆಗಸ್ಟ್‌ನಿಂದ ದೊರೆಯಲಿದೆ ಎಂದರು. ನಿವೃತ್ತ ಮುಖ್ಯಕಾರ್ಯದರ್ಶಿ ಸುಧಾಕರ್ ನೇತೃತ್ವದ ವೇತನ ಆಯೋಗ ಶೇಕಡ 31ರಷ್ಟು ತುಟ್ಟಿಭತ್ಯೆಯನ್ನು ಮೂಲವೇತನದಲ್ಲಿ ವಿಲೀನಗೊಳಿಸಿ ಜೊತೆಗೆ ಶೇಕಡ 27.50ರಷ್ಟು ಫಿಟ್‌ಮೆಂಟ್ ನೀಡುವಂತೆ ಶಿಫಾರಸು ಮಾಡಿತ್ತು.

ಆಯೋಗದ ಶಿಫಾರಸ್ಸಿನಂತೆ ನೌಕರರ ವೇತನ, ಭತ್ಯೆ, ಪಿಂಚಣಿಯನ್ನು 2022ರ ಜುಲೈ 1ರಿಂದ (2ನೇ ಪುಟಕ್ಕೆ)

## ಖಾಸಗಿ ಸಿ, ಡಿ ದರ್ಜೆಯ ಶೇ.100 ಹುದ್ದೆಗಳು ಕನ್ನಡಿಗರಿಗೆ ಮೀಸಲು : ರಾಜ್ಯ ಸಂಪುಟದ ಒಪ್ಪಿಗೆ

ಬೆಂಗಳೂರು, ಜು. 16 - ಖಾಸಗಿ ಉದ್ಯಮಗಳ ಸಿ ಮತ್ತು ಡಿ ದರ್ಜೆಯ ಹುದ್ದೆಗಳನ್ನು ಶೇಕಡ ನೂರರಷ್ಟು ಕನ್ನಡಿಗರಿಗೆ ಮೀಸಲಿಡುವ ಮಸೂದೆಗೆ ರಾಜ್ಯ ಸಂಪುಟ ಒಪ್ಪಿಗೆ ನೀಡಿದೆ.

ಸೋಮವಾರ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ನಿನ್ನೆ ನಡೆದ ಸಂಪುಟ ಸಭೆಯಲ್ಲಿ, ಎಲ್ಲಾ ಖಾಸಗಿ ಉದ್ಯಮಗಳ ಸಿ ಮತ್ತು ಡಿ ದರ್ಜೆಯ ಎಲ್ಲಾ ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದವರು ಹೇಳಿದ್ದಾರೆ.

ಕನ್ನಡಿಗರು ಕನ್ನಡದ ನೆಲದಲ್ಲಿ ಉದ್ಯೋಗ ವಂಚಿತರಾಗುವುದನ್ನು ತಪ್ಪಿಸಿ, ತಾಯ್ನಾಡಿನಲ್ಲಿ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂಬುದು ನಮ್ಮ ಸರ್ಕಾರದ ಆಶಯ. ನಮ್ಮದು ಕನ್ನಡ ಪರವಾದ ಸರ್ಕಾರ. (2ನೇ ಪುಟಕ್ಕೆ)

# ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷರಾಗಿ ನಾಗರಾಜ್ ಬಡದಾಳ್

ದಾವಣಗೆರೆ, ಜು.16- ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷರಾಗಿ ಕನ್ನಡಪ್ರಭ ಹಿರಿಯ ವರದಿಗಾರ ನಾಗರಾಜ ಎಸ್.ಬಡದಾಳ್ ಆಯ್ಕೆಯಾಗಿದ್ದಾರೆ.



ವರದಿಗಾರರ ಕೂಟದ ಕಚೇರಿಯಲ್ಲಿ ಕೂಟದ ಅಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ನಾಗರಾಜ ಬಡದಾಳ್ 29 ಮತಗಳ ಅಂತರದಿಂದ ಜಯ ಗಳಿಸಿದರು.

ನಾಗರಾಜ್ ಬಡದಾಳ್ 74 ಮತಗಳನ್ನು ಗಳಿಸಿ ಚುನಾಯಿತರಾದರೆ, ಅವರ ಪ್ರತಿಸ್ಪರ್ಧಿಯಾಗಿದ್ದ ಸುವರ್ಣ ಟಿವಿ ಹಿರಿಯ ವರದಿಗಾರ ಡಾ. ಸಿ. ವರದರಾಜ್ 45, ದಾವಣಗೆರೆ ಕನ್ನಡಿಗ ಸಂಪಾದಕ ಆರ್. ರವಿ 36 ಮತ ಪಡೆದು ಪರಾಭವಗೊಂಡರು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಒಟ್ಟು ಐವರಲ್ಲಿ ಮಧು ನಾಗರಾಜ್ ಮತ್ತು ಹೆಚ್.ಎಂ.ಪಿ.ಕುಮಾರ್ ತಮ್ಮ ಅಭ್ಯರ್ಥಿಗಳನ್ನು ಬೆಂಬಲಿಸಿ ಕಣದಿಂದ ಹಿಂದಕ್ಕೆ ಸರಿದಿದ್ದರು. ಒಟ್ಟು 164 ಮತದಾರರಲ್ಲಿ 156 ಸದಸ್ಯರು ತಮ್ಮ ಹಕ್ಕನ್ನು ಚಲಾಯಿಸಿದರು. ಒಂದು ಮತ ತಿರಸ್ಕೃತಗೊಂಡಿತ್ತು.

ಚುನಾವಣಾಧಿಕಾರಿ ಕನ್ನಡ ಭಾರತಿ ಸಂಪಾದಕ ಮಲ್ಲಿಕಾರ್ಜುನ್ ಕಬ್ಬೂರು ಫಲಿತಾಂಶ ಪ್ರಕಟಿಸಿದರು. ಸಂಯುಕ್ತ ಕರ್ನಾಟಕ ವರದಿಗಾರ ಡಿ. ರಂಗನಾಥ್ ರಾವ್ ಸಹಾಯಕ ಚುನಾವಣಾಧಿಕಾರಿಯಾಗಿದ್ದರು. ಜನತಾವಾಣಿ ವರದಿಗಾರ ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ ಚುನಾವಣಾಧಿಕಾರಿಗಳಿಗೆ ಸಹಕರಿಸಿದರು.






# ಭದ್ರಾ ಜಲಾಶಯಕ್ಕೆ ಹೆಚ್ಚಿದ ಒಳಹರಿವು



**ಅಪಾಯ ಮಟ್ಟ ಮೀರಿ ಹರಿಯುತ್ತಿರುವ ತುಂಗಭದ್ರೆ**

**ಉಕ್ಕಡಗಾತ್ರಿ - ಪತ್ತೇಪುರ ಸಂಪರ್ಕ ಬಂದ್**

ಶಿವಮೊಗ್ಗ, ಜು.16- ಮಲೆನಾಡಿನಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಭದ್ರಾ ಮತ್ತು ತುಂಗಾ ನದಿಗಳಲ್ಲಿ ನೀರಿನ ಹರಿವು ಭಾರೀ ಪ್ರಮಾಣದಲ್ಲಿ ಹೆಚ್ಚಳವಾಗಿದೆ.

ಭದ್ರಾ ನದಿ ನೀರಿನಲ್ಲಿ ಹೆಬ್ಬಾಳೆ ಸೇತುವೆ ಮುಳುಗಡೆಯಾಗಿದ್ದು, ಕಳಸ-ಹೊರನಾಡು ರಸ್ತೆ ಸಂಪರ್ಕ ಕಡಿತವಾಗಿದೆ.

ಈ ಮಳೆಗಾಲದಲ್ಲಿ ಇದೇ ಮೊದಲ ಬಾರಿಗೆ ಹೆಬ್ಬಾಳೆ ಸೇತುವೆ ಮುಳುಗಿದೆ ಎನ್ನಲಾಗಿದೆ. ಇದರಿಂದಾಗಿ ಭದ್ರಾ ಜಲಾಶಯಕ್ಕೆ ಬರುವ ನೀರಿನ ಒಳಹರಿವು ಗಣನೀಯವಾಗಿ ಹೆಚ್ಚಳವಾಗಿದೆ. ಸೋಮವಾರ 16040 ಕ್ಯೂಸೆಕ್ಸ್ ಇದ್ದ ನೀರಿನ ಒಳಹರಿವು ಮಂಗಳವಾರ ಬೆಳಿಗ್ಗೆ 27839 ಕ್ಯೂಸೆಕ್ಸ್‌ಗೆ ಏರಿಕೆಯಾಗಿದೆ.

ಜಲಾಶಯದ ನೀರಿನ ಮಟ್ಟ 144 ಅಡಿ 7 ಇಂಚು ಆಗಿದೆ. ಕಳೆದ ವರ್ಷ ಜಲಾಶಯದಲ್ಲಿ ಈ ದಿನ 141 ಅಡಿ 3 ಇಂಚು ನೀರಿತ್ತು.

ಭದ್ರಾ ಜಲಾಶಯಕ್ಕೆ ನೀರಿನ ಒಳಹರಿವು ದಿಢೀರ್ ಹೆಚ್ಚಾಗಿರುವುದು ಅಚ್ಚುಕಟ್ಟಿನ ರೈತರಿಗೆ ಸಂತಸ ತಂದಿದ್ದು, ಮುಂಗಾರು ಹಂಗಾಮಿನಲ್ಲಿ ಭತ್ತದ ನಾಟಿ ಮಾಡುವ ಆಶಾ ಭಾವನೆ ಮೂಡಿದೆ.

**ತುಂಗಭದ್ರಾ ನದಿಯಲ್ಲಿ ನೀರು ಹೆಚ್ಚಳ : ರಸ್ತೆ ಸಂಪರ್ಕ ಕಡಿತ**

ಗಾಜನೂರಿನ ತುಂಗಾ ಜಲಾಶಯಕ್ಕೆ 60 ಸಾವಿರ ಕ್ಯೂಸೆಕ್ಸ್‌ಗೂ ಅಧಿಕ ನೀರಿನ ಒಳಹರಿವು ಇದ್ದು, ಅಷ್ಟೇ ಪ್ರಮಾಣದ (2ನೇ ಪುಟಕ್ಕೆ)

## ಭಾವಪೂರ್ಣ ಶ್ರದ್ಧಾಂಜಲಿ



ಫುಟ್ಬಾಲ್ ಕ್ಲಬ್ ಹಿರಿಯ ಆಟಗಾರರೂ, ಲೆಕ್ಕ ಪರಿಶೋಧಕರೂ ಆದ

**ಶ್ರೀ ಶಿವಪ್ರಕಾಶ್ ಜಿ.ಬಿ.**

ಅವರು ದಿನಾಂಕ 16-7-2024ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಕೃಷ್ಣ ಎನ್. ಜಾಧವ್, ಕಾರ್ಯದರ್ಶಿಗಳು ಮತ್ತು ಕಂದಾಯಾಧಿಕಾರಿಗಳು, ಮಹಾನಗರ ಪಾಲಿಕೆ
ಮತ್ತು ಪದಾಧಿಕಾರಿಗಳು ಹಾಗೂ ಸದಸ್ಯರು ಮತ್ತು
ಹಿರಿಯ-ಕಿರಿಯ ಫುಟ್ಬಾಲ್ ಆಟಗಾರರು
**ದಾವಣಗೆರೆ ಫುಟ್ಬಾಲ್ ಕ್ಲಬ್**

# ಸವಾಲುಗಳಿಗೆ ಅಂಜದೇ - ಅಳುಕದೇ ಬದುಕು ಕಟ್ಟಿಕೊಳ್ಳಬೇಕು

## ಹೊನ್ನಾಳಿಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಕೆ. ನಾಗೇಶ್



ಹೊನ್ನಾಳಿ, ಜು.16- ಬರುವ ಒಂದು ತಿಂಗಳೊಳಗಾಗಿ ದಾವಣಗೆರೆಯಲ್ಲಿ ಐಎಎಸ್ - ಕೆಎಎಸ್ ತರಬೇತಿ ಕೇಂದ್ರವನ್ನು ತೆರೆಯುವುದಾಗಿ ಇನ್‌ಸೈಟ್ ತರಬೇತಿ ಸಂಸ್ಥೆಯ ಸಂಸ್ಥಾಪಕ ಜಿ.ಬಿ.ವಿನಯ್ ಕುಮಾರ್ ತಿಳಿಸಿದರು.

ಇಲ್ಲಿನ ಮೃತ್ಯುಂಜಯ ಶಿವಾಚಾರ್ಯ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಮಂಗಳವಾರ ನಡೆದ ಕ್ರೀಡೆ, ಸಾಂಸ್ಕೃತಿಕ, ಎನ್‌ಎಸ್‌ಎಸ್ ವಿವಿಧ ವೇದಿಕೆಗಳ ಸಮಾರೋಪ ಸಮಾರಂಭ, ಸಾಧಕರಿಗೆ ಸನ್ಮಾನ ಹಾಗೂ ತೃತೀಯ ವರ್ಷದ ಬಿಎ, ಬಿಕಾಂ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ದಾವಣಗೆರೆ ವಿಶ್ವವಿದ್ಯಾಲಯದ ಪ್ರಥಮ ರ್‍ಯಾಂಕ್ ಪಡೆದ ಈ ಕಾಲೇಜಿನ ಎಸ್. ಸಿಂಧೂಬಾಯಿ ಅವರಂತಹ ಸಾಧನೆಯ ವಿದ್ಯಾರ್ಥಿಗಳು ಐಎಎಸ್ - ಕೆಎಎಸ್ ವಿದ್ಯಾಭ್ಯಾಸ ಪಡೆಯಲು ಮುಂದಾದರೆ ಉಚಿತ ಶಿಕ್ಷಣ ನೀಡುವುದಾಗಿ ಅವರು ಹೇಳಿದರು.

ರಾಜಕಾರಣದ ಮೂಲಕವೂ ಶಿಕ್ಷಣ ಸುಧಾರಣೆ - ವಿದ್ಯಾರ್ಥಿಗಳೇ ನೀವು ತಿಳಿದಂತೆ ಕೆಎಎಸ್ ಹಾಗೂ ಐಎಎಸ್ ಇರುವ ಅರ್ಥ ಒಂದಾದರೆ, ನಾನು ತಿಳಿದಿರುವಂತೆ 'ಕೆಎಎಸ್ ಎಂದರೆ - ಎಂಎಲ್‌ಎ, ಐಎಎಸ್ ಎಂದರೆ - ಎಂಪಿ ಎಂಬುದಾಗಿದೆ.'

ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಎಂತಹ ಸಾಧನೆ ಮಾಡಲು ಸಾಧ್ಯ ಎಂಬುದಕ್ಕೆ ನಾನೇ ಸಾಕ್ಷಿಯಾಗಿ ನಿಲ್ಲುವೆ ಎಂದು ತಾವು ಆರಂಭದಲ್ಲಿ ಬೆಂಗಳೂರಿನಲ್ಲಿ ತೆರೆದ ತರಬೇತಿ ಕೇಂದ್ರದ ದಿನಗಳನ್ನು ವಿವರಿಸಿ, ಇಂದು ಏಳರಿಂದ ಎಂಟು ರಾಜ್ಯಗಳಲ್ಲಿ ಹತ್ತು ವರ್ಷದಿಂದ 1500ಕ್ಕೂ ಹೆಚ್ಚು ಸಾಧಕರು ತರಬೇತಿಯ ಮೂಲಕ ಪ್ರಯೋಜನ ಪಡೆದಿರುತ್ತಾರೆಂದರು.

**ಇನ್ನೊಂದು ತಿಂಗಳಲ್ಲಿ ದಾವಣಗೆರೆಯಲ್ಲಿ ಐಎಎಸ್ - ಕೆಎಎಸ್ ತರಬೇತಿ ಕೇಂದ್ರ ಪ್ರಾರಂಭ**
**- ಜಿ.ಬಿ. ವಿನಯ್ ಕುಮಾರ್**

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಮತ್ತೊಬ್ಬರು ನಮ್ಮಿಂದ ಕದಿಯಲಾಗದ ವಸ್ತು ಎಂದರೆ ಅದು ತಾವುಗಳು ಪಡೆದಿರುವ 'ವಿದ್ಯೆ'ಯಾಗಿದೆ ಎಂಬುದನ್ನು ವಿವರಿಸಿ, ದುಶ್ಚಟಗಳಿಂದ ವಿದ್ಯಾರ್ಥಿಗಳು ದೂರವಿದ್ದು, ವಿದ್ಯಾ ಕ್ಷೇತ್ರದಲ್ಲಿ ಸಾಧನೆಗೆ ಅನೇಕ ಅವಕಾಶಗಳಿವೆ ಎಂದರು.

ಕಾಲೇಜು ಸಾಂಸ್ಕೃತಿಕ ಸಂಚಾಲಕ ಕೆ.ನಾಗೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಪದವಿ ಪಡೆದು ಹೊರ ಹೋಗುವ ವಿದ್ಯಾರ್ಥಿಗಳು ತಮ್ಮ ಕನಸು ನನಸಾಗಿಸುವ ನಿಟ್ಟಿನಲ್ಲಿ ಬದುಕನ್ನು ಕಟ್ಟಿಕೊಳ್ಳುವಂತಾಗಲಿ.

ಮುಂಬರುವ ದಿನಗಳು ಸವಾಲಿನ ದಿನಗಳು ಅಂಜದೇ - ಅಳುಕದೇ ನೌಕರಿ ಸಿಕ್ಕರೆ ಸರಿ, ಇಲ್ಲವಾದಲ್ಲಿ ತಾವು ಧೃತಿಗೆಡದೇ ಅನೇಕ ರೀತಿಯ ಅವಕಾಶಗಳಿರುವ ಬದುಕು ಕಟ್ಟಿಕೊಳ್ಳುವ ಆತ್ಮವಿಶ್ವಾಸವನ್ನು ಹೊಂದಬೇಕೆಂದರು.

ದೈಹಿಕ ಶಿಕ್ಷಣ ನಿರ್ದೇಶಕ ಪ್ರಕಾಶ್ ಎಲ್.ನರಗಟ್ಟಿ ಮಾತನಾಡಿದರು.

ಕಾಲೇಜು ಪ್ರಾಚಾರ್ಯರಾದ ಪ್ರವೀಣ್ ದೊಡ್ಡ ಗೌಡ್ರು ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಚೆನ್ನಯ್ಯ ಬೆನ್ನೂರು ಮಠ ಮತ್ತಿತರರು ಉಪಸ್ಥಿತರಿದ್ದರು.



# ಹರಿಹರ : ರೈಲ್ವೆ ಫ್ಲೈ ಓವರ್ ಕೆಳಗಿನ ರಸ್ತೆಯ ಕಬ್ಬಿಣದ ರಾಡಿನಿಂದ ಸಂಚಾರಕ್ಕೆ ಅಡಚಣೆ

ಹರಿಹರ, ಜು.16- ನಗರದ ಅಮರಾವತಿಯ ಫ್ಲೈ ಓವರ್ ಹತ್ತಿರದ ಕೆಳಭಾಗದ ರಸ್ತೆ ಸಂಪೂರ್ಣ ಹಾಳಾಗಿ ರಸ್ತೆಯಲ್ಲಿರುವ ಕಬ್ಬಿಣದ ರಾಡುಗಳು ರಸ್ತೆಯ ಮೇಲಕ್ಕೆ ಬಂದಿದ್ದು, ರಸ್ತೆಯ ಮೇಲೆ ಎದ್ದಿರುವ ರಾಡುಗಳ ಮೇಲೆ ವಾಹನ ಚಲಾಯಿಸಿದರೆ ಟೈರ್‌ಗಳು ಪಂಚಾರ್ ಆಗುತ್ತವೆ ಎಂದು ಪಕ್ಕದಲ್ಲಿ ಸರಿಯುವ ವೇಳೆ ಸಾಕಷ್ಟು ಅಪಘಾತ ಸಂಭವಿಸಿ ಸಾರ್ವಜನಿಕರ ಸಾವು ನೋವುಗಳಿಗೆ ಕಾರವಾಗಿದೆ.

ಜೊತೆಗೆ ವಾಹನಗಳು ಕಬ್ಬಿಣದ ರಾಡುಗಳ ಮೇಲೆ ಹಾದು ಹೋದಾಗ ಟೈರುಗಳು ಬ್ಲಾಸ್ಟ್ ಆಗುವಂತಹ ಸಾಧ್ಯತೆಗಳು ಕೂಡ ಹೆಚ್ಚು ಇರುತ್ತದೆ.

ಈ ಕಾಂಕ್ರೀಟ್ ರಸ್ತೆಯಲ್ಲಿ ಬಹಳಷ್ಟು ಗುಂಡಿಗಳು ಇರುವುದರಿಂದ ಮಳೆಯಿಂದಾಗಿ ಗುಂಡಿಗಳಲ್ಲಿ ನೀರು ತುಂಬಿಕೊಂಡು ಗುಂಡಿಯ ಹಾಳ ಅಗಲವನ್ನು ಅರಿಯದೇ ವಾಹನಗಳು ಗುಂಡಿಗೆ ಬಿದ್ದು, ಯುವಕರು ಕೈ ಕಾಲು ಮುರಿದುಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡಯುವಂತಾಗಿದೆ.

ಇಲ್ಲಿನ ರಸ್ತೆಯಲ್ಲಿ ದಿನಕ್ಕೆ ಸಣ್ಣ ಮತ್ತು ದೊಡ್ಡ ಪ್ರಮಾಣದ ಸಾವಿರಾರು ವಾಹನಗಳು ಸಂಚಾರ ಮಾಡುತ್ತವೆ. ಆದ್ದರಿಂದ ಇಲ್ಲಿನ ರಸ್ತೆಗೆ ಸಂಭಂದಿಸಿದ ಲೋಕೋಪಯೋಗಿ ಅಥವಾ ನಗರಸಭೆಯ ಇಲಾಖೆಯ ಅಧಿಕಾರಿಗಳು ಆದಷ್ಟು ಬೇಗನೇ ರಸ್ತೆಯನ್ನು ದುರಸ್ತಿಪಡಿಸಿ, ಸಾರ್ವಜನಿಕರು ನಿರ್ಭಯವಾಗಿ ಓಡಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ಸಾರ್ವಜನಿಕರು ಆಗ್ರಹಿಸಿದರು.

ಚಿತ್ರ : ಜಿಗಳಿ ಪ್ರಕಾಶ್



## ಗಮನ ಸೆಳೆದ ಯಾಂತ್ರೀಕೃತ ಭತ್ತದ ನಾಟಿ...

ಮಲೇಬೆನ್ನೂರು, ಜು.16- ಉಕ್ಕಡಗಾತ್ರಿ ಗ್ರಾಮದ ಹೊರ ವಲಯದಲ್ಲಿ ರೈತ ಶ್ರೀನಿವಾಸ್ ಕುಲಕರ್ಣಿ ಅವರ ಗದ್ದೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಾಡಿಸಲಾಗಿರುವ ಯಾಂತ್ರೀಕೃತ ಭತ್ತದ ನಾಟಿ ರೈತರ ಗಮನ ಸೆಳೆಯುತ್ತಿದೆ.

# ಜಗಳೂರಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಜಗಳೂರು, ಜು.16- ಶ್ರೀ ರಾಘವೇಂದ್ರ ಆಸ್ಪತ್ರೆಯಲ್ಲಿ ದಿ. ಡಾ.ಎಂ.ಎಚ್ ರಮೇಶ್ ಅವರ 10ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ನಡೆಯಿತು. ಶ್ರೀ ರಾಘವೇಂದ್ರ ಆಸ್ಪತ್ರೆ, ದಾವಣಗೆರೆಯ ಸಿಜಿ ಆಸ್ಪತ್ರೆ, ರಕ್ತ ನಿಧಿ ಭಂಡಾರ ಮತ್ತು ಸಾರ್ವಜನಿಕ ಆಸ್ಪತ್ರೆಯ ಐಸಿಟಿಸಿ ಕೇಂದ್ರ ಇವರ ಸಹಯೋಗದಲ್ಲಿ ಶಿಬಿರ ಆಯೋಜಿಸಲಾಗಿತ್ತು. ರಾಘವೇಂದ್ರ ಆಸ್ಪತ್ರೆಯ ಮುಖ್ಯಸ್ಥ ಡಾ. ಅನಿರುದ್ಧ್, ಡಾ. ಅರ್ಪಿತಾ, ಡಾ. ಅಕ್ಷಯ್, ಆಪ್ತ ಸಮಾಲೋಚಕ ರಾಘವೇಂದ್ರ, ಐಸಿಟಿಸಿ ವಿಭಾಗದ ಟಿ. ಉಮೇಶ್, ವಿಜಯಲಕ್ಷ್ಮಿ, ರಮೇಶ್ ಮತ್ತಿತರರಿದ್ದರು

# ಏರಿದ ಟೊಮ್ಯಾಟೋ ಬೆಲೆ

**(1ನೇ ಪುಟದಿಂದ)** ಹೈಬ್ರಿಡ್ ತಂತ್ರಜ್ಞಾನದ ಅನುಮತಿಯನ್ನು 11 ಕಂಪನಿಗಳಿಗೆ ನೀಡಲಾಗಿದೆ. ಈ ಕಂಪನಿಗಳು 2012-22ರ ಅವಧಿಯಲ್ಲಿ ಬೀಜಗಳ ಮಾರಾಟದಿಂದ 3,600 ಕೋಟಿ ರೂ.ಗಳ ವಹಿವಾಟು ನಡೆಸಿವೆ.

ಮೂರು ವರ್ಷಗಳ ಹಿಂದೆ ಅಬೇಧ್ ತಳಿ ರೂಪಿಸಲಾಗಿತ್ತು. ಇದು ಮೂರು ವಾರ ಕಾಲ ಚೆನ್ನಾಗಿರುತ್ತದೆ ಹಾಗೂ ದೂರದ ಊರುಗಳಿಗೆ ಸಾಗಿಸಲು ಅನುಕೂಲಕರವಾಗುವಂತಿದೆ.

ಈ ಎರಡೂ ತಳಿಗಳು ಹಲವು ರೋಗಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿವೆ. ಇವುಗಳು ಯಶಸ್ವಿಯಾದರೆ ಮಾರುಕಟ್ಟೆಯಲ್ಲಿ ಸ್ಥಿರತೆ ಬರುವ ನಿರೀಕ್ಷೆ ಇದೆ. ಬೀಜಗಳ ಮಾರಾಟ ಹೆಚ್ಚಿಸಲು ಐ.ಐ.ಹೆಚ್.ಆರ್. ಇತ್ತೀಚೆಗೆ ರಾಷ್ಟ್ರೀಯ ಬೀಜ ನಿಗಮದ ಜೊತೆ ಸಹಭಾಗಿತ್ವ ಹೊಂದಿದೆ.

ದೇಶದಲ್ಲಿ 8-10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಟೊಮ್ಯಾಟೋ ಬೆಳೆಯಲಾಗುತ್ತಿದೆ. ಈ ಪೈಕಿ ಎರಡು ಹೈಬ್ರಿಡ್ ಬೆಳೆ ಎಷ್ಟು ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ ಎಂಬ ಮಾಹಿತಿ ಸ್ಪಷ್ಟವಿಲ್ಲ. ದೀರ್ಘಾವಧಿವರೆಗೆ ಬಾಳಿಕೆಗೆ ಬರುವ ಟೊಮ್ಯಾಟೋಗಳಿಂದ ಬೆಳೆಗಾರರು ಹಾಗೂ ಗ್ರಾಹಕರಿಬ್ಬರಿಗೂ ಅನುಕೂಲವಾಗುವ ನಿರೀಕ್ಷೆ ಇದೆ.

## ಖಾಸಗಿ ಸಿ, ಡಿ ದರ್ಜೆಯ ಶೇ.100 ಹುದ್ದೆಗಳು ಕನ್ನಡಿಗರಿಗೆ ಮೀಸಲು

**(1ನೇ ಪುಟದಿಂದ) (1ನೇ ಪುಟದಿಂದ)** ಕನ್ನಡಿಗರ ಹಿತ ಕಾಯುವುದು ನಮ್ಮ ಆದ್ಯತೆಯಾಗಿದೆ ಎಂದವರು ಹೇಳಿದ್ದಾರೆ. ಇದೇ ವೇಳೆ ನಿರ್ವಹಣಾ ಹುದ್ದೆಗಳಲ್ಲಿ ಶೇ.50 ಹಾಗೂ ನಿರ್ವಹಣೇತರ ಹುದ್ದೆಗಳಲ್ಲಿ ಶೇ.75ರಷ್ಟನ್ನು ಕನ್ನಡಿಗರಿಗೆ ಮೀಸಲಿಡಲಾಗುವುದು.


ಕನ್ನಡದಲ್ಲಿ ಮಾಧ್ಯಮಿಕ ಶಾಲೆಯ ಪ್ರಮಾಣ ಪತ್ರ ಹೊಂದಿರದೇ ಇರುವವರು, ಕನ್ನಡ ಪರೀಕ್ಷೆಯೊಂದರಲ್ಲಿ ಉತ್ತೀರ್ಣರಾಗಬೇಕಿದೆ. ಸ್ಥಳೀಯವಾಗಿ ಅರ್ಹರು ಲಭ್ಯವಿಲ್ಲದೇ ಇದ್ದರೆ, ಮೂರು ವರ್ಷದಲ್ಲಿ ಸ್ಥಳೀಯರಿಗೆ ತರಬೇತಿ ನೀಡಬೇಕಿದೆ.

**6ನೇ ವರ್ಷದ ಪುಣ್ಯಸ್ಮರಣೆ**



**ದಿ|| ಗೋಪನಾಳ್ ಪಿ.ವಿ. ಕಲ್ಲೇಶಪ್ಪ**
ನಿಧನ : 17.07.2018
ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು.
ನಿಮ್ಮ ಅಗಾಧ ವಾತ್ಸಲ್ಯದ ಅಮೃತಧಾರೆ ಅವಿಸ್ಮರಣೀಯ. ನಿಮ್ಮ ನೆನಪೇ ನಮಗೆ ಪ್ರೇರಣಾದಾಯಕ ಹಾಗೂ ಚೈತನ್ಯಪೂರ್ಣ.
ಸದಾ ನಿಮ್ಮ ಸ್ಮರಣೆಯಲ್ಲಿರುವ
✦ ಛೇರ್ಮನ್ ಎನ್.ಇ.ರವಿ, ಕಾಶೀಪುರ ಪಿ.ವಿ.ಕೆ.ಟ್ರೇಡರ್ಸ್
✦ ಕಲ್ಪನಹಳ್ಳಿ ಎಸ್.ಎನ್.ಮಲ್ಲಿಕಾರ್ಜುನ್ ಎಸ್.ಎಂ.ಟಿ. ಟ್ರೇಡರ್ಸ್
✦ ದೀಪು ✦ ಪ್ರವೀಣ ✦ ಗಜೇಂದ್ರ, ಪಿ.ವಿ.ಕೆ. ಟ್ರೇಡರ್ಸ್

**ಆಡಿಟರ್ ಶಿವಪ್ರಕಾಶ್ ನಿಧನ**



ದಾವಣಗೆರೆ ಎಸ್.ಎಸ್. ಬಡಾವಣೆ ವಾಸಿ, ಆಡಿಟರ್ ಶಿವಪ್ರಕಾಶ್ (54) ಅವರು ದಿನಾಂಕ 16.7.2024ರ ಮಂಗಳವಾರ ಸಂಜೆ 4 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಸಹೋದರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.7.2024 ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಹರಿಹರ ತಾಲ್ಲೂಕು ಹಾಲಿವಾಣ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಶ್ರೀಮತಿ ಶಾಂತಮ್ಮ ನಿಧನ**



ಹರಿಹರ ತಾಲ್ಲೂಕು ಕೆಂಚನಹಳ್ಳಿ ಗ್ರಾಮದ ವಾಸಿ
ದಿ. ಕೆ.ಜಿ. ಹನುಮಂತಪ್ಪ (ಕಡೇಮನಿ) ಇವರ ಧರ್ಮಪತ್ನಿ
**ಶ್ರೀಮತಿ ಶಾಂತಮ್ಮ**
ಅವರು ದಿನಾಂಕ 16.7.2024ರ ಮಂಗಳವಾರ ಸಂಜೆ 7.05ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 17.7.2024 ರಂದು ಬುಧವಾರ ಮಧ್ಯಾಹ್ನ 1 ಗಂಟೆಗೆ ಕೆಂಚನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತ ಕುಟುಂಬ ವರ್ಗ : **99725 91175**

# ಪ್ರಜ್ವಲ್ ತಪ್ಪು ಮಾಡಿದ್ದರೆ ಗಲ್ಲಿಗೇರಿಸಿ

**(1ನೇ ಪುಟದಿಂದ)** ಎಂದು ಮನವಿ ಮಾಡಿದರು.

ಜೆಡಿಎಸ್ ಶಾಸಕ ಕೃಷ್ಣಪ್ಪ ಅವರು, ರೇವಣ್ಣ ಅವರ ಪುತ್ರ ತಪ್ಪು ಮಾಡಿದ್ದಾರೆ ಎಂದು ಹೇಳುವುದು ಸರಿಯಲ್ಲ, ಅದನ್ನು ನ್ಯಾಯಾಲಯ ತೀರ್ಮಾನ ಮಾಡುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಆರ್.ಅಶೋಕ್ ತಮ್ಮ ಹೇಳಿಕೆ ಸರಿಪಡಿಸಿಕೊಳ್ಳುವುದಾಗಿ ಸದನಕ್ಕೆ ತಿಳಿಸಿದರು. ಈ ಚರ್ಚೆ ನಡುವೆಯೇ ಪದೇ ಪದೇ ವಿಷಯ ಪ್ರಸ್ತಾಪವಾದಾಗ ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್, ಎರಡು ಎಸ್‌ಐಟಿ ತಂಡಗಳ ನಡುವೆ ಪದೇ ಪದೇ ಹೋಲಿಕೆ ಮಾಡಿ ಮಾತನಾಡುತ್ತಿರುವುದು ಏಕೆ? ನೂರಾರು ಮಹಿಳೆಯರ ಮಾನಹರಣವಾಗಿರುವ ಪ್ರಕರಣ ವಾಲ್ಮೀಕಿ ಹಗರಣಕ್ಕಿಂತಲೂ ಕಡಿಮೆ ಎಂಬ ಧೋರಣೆಯೇ, ಮಹಿಳೆಯರ ಮಾನಕ್ಕೆ ಬೆಲೆ ಇಲ್ಲವೇ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನ ನಾರಾಯಣ ಸ್ವಾಮಿ ಮಧ್ಯಪ್ರವೇಶಿಸಿ, ಹಣ ಹೋದರೆ ಬರುತ್ತದೆ, ಮಾನ ಹೋದರೆ ಬರುತ್ತದೆಯೇ ಎಂದರು.

ಈ ಹಂತದಲ್ಲಿ ಸಿಟ್ಟಾದ ರೇವಣ್ಣ ನಿಮ್ಮ ಬಂಡವಾಳ ಗೊತ್ತಿದೆ, ಕುಳಿತುಕೊಳ್ಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತು ಮುಂದುವರೆಸಿದ ರೇವಣ್ಣ, ತಪ್ಪು ಮಾಡಿದ್ದರೆ ನನ್ನ ಮಗನನ್ನು ಗಲ್ಲಿಗೆ ಹಾಕಿ. ರಾಜಕೀಯ ದುರುದ್ದೇಶಕ್ಕಾಗಿ, ತಪ್ಪು ಮಾಡದವರ ವಿರುದ್ಧ ಪ್ರಕರಣ ದಾಖಲಿಸಿ, ಜೈಲಿಗೆ ಕಳುಹಿಸಿ ನಿಮ್ಮ ರಾಜಕೀಯ ಸೇಡುಗಳನ್ನು ತೀರಿಸಿಕೊಳ್ಳುವುದನ್ನು ಬಿಡಿ. ಮುಂದೆ ಇದೇ ವೇದಿಕೆಯಲ್ಲಿ ಎಲ್ಲವನ್ನೂ ಚರ್ಚಿಸೋಣ ಎಂದರು.

# 7ನೇ ವೇತನ ಆಯೋಗದ ಶಿಫಾರಸ್ಸು ಜು.1ರಿಂದಲೇ ಪೂರ್ವಾನ್ವಯ: ಸಿಎಂ

**(1ನೇ ಪುಟದಿಂದ)** ಅನ್ವಯವಾಗುವಂತೆ ಪರಿಷ್ಕರಿಸಿ, ಆಗಸ್ಟ್ 2024ರಿಂದ ಅನುಷ್ಠಾನಗೊಳಿಸಲು ಸಂಪುಟ ತೀರ್ಮಾನಿಸಿದೆ ಎಂದು ಹೇಳಿದರು.

ಈ ನಿರ್ಧಾರದಿಂದ ಸರ್ಕಾರಿ ನೌಕರರಲ್ಲದೆ, ಪಿಂಚಣಿ ಪಡೆಯುವರು, ಸರ್ಕಾರಿ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಸಿಬ್ಬಂದಿಗೂ ಇದರ ಲಾಭ ದೊರೆಯಲಿದೆ.

ನೌಕರರ ಕನಿಷ್ಠ ಮೂಲವೇತನ 17,000 ರೂ.ನಿಂದ 27,000ಕ್ಕೆ, ಗರಿಷ್ಠ ವೇತನವು 1,50,600 ರೂ.ನಿಂದ 2,41,200 ರೂ.ಗಳಿಗೆ ಪರಿಷ್ಕರಣೆಯಾಗಿದೆ.

ಪಿಂಚಣಿಯು ಕನಿಷ್ಠ 8,500 ರೂ.ನಿಂದ 13,500 ರೂ.ಗೆ, ಗರಿಷ್ಠ 75,300 ರೂ.ನಿಂದ 1,20,600 ರೂ.ಗೆ ಪರಿಷ್ಕರಣೆ ಮಾಡಲಾಗಿದೆ.

ಈ ಪರಿಷ್ಕರಣೆಯು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು, ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗಳಿಗೂ ಅನ್ವಯವಾಗುತ್ತದೆ.

ನೌಕರರ ವೇತನ ಪರಿಷ್ಕರಣೆಯಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 20,208 ಕೋಟಿ ರೂ. ಹೊರೆ ಬೀಳಲಿದೆ ಎಂದು ವಿವರಿಸಿದರು.

# ಇಸ್ರೇಲ್ ಸಂಪ್ರದಾಯವಾದಿಗಳ ಸೇರ್ಪಡೆಗೆ ಮುಂದಾದ ಸೈನ್ಯ : ನೇತನ್ಯಾಹು ಸರ್ಕಾರಕ್ಕೆ ಹೊಸ ಸವಾಲು

ಜೆರುಸಲೇಂ, ಜು. 16 - ಯಹೂದಿ ಕಟ್ಟಾ ಸಂಪ್ರದಾಯವಾದಿ ಪುರುಷರನ್ನು ಸೈನ್ಯಕ್ಕೆ ನೇಮಕ ಮಾಡಿಕೊಳ್ಳಲು ಇಸ್ರೇಲ್ ಸೈನ್ಯ ಮುಂದಾಗಿದೆ. ಇದಕ್ಕಾಗಿ ಕರಡು ನೋಟಿಸ್ ಕಳಿಸುವುದಕ್ಕೆ ಚಾಲನೆ ನೀಡಲಾಗುವುದು.

ಸೈನ್ಯದ ಈ ಕ್ರಮ ಪ್ರಧಾನಮಂತ್ರಿ ಬೆಂಜಮಿನ್ ನೇತನ್ಯಾಹು ಸರ್ಕಾರ ಅಸ್ಥಿರತೆಗೆ ಹಾಗೂ ಪ್ರತಿಭಟನೆಗಳಿಗೆ ಕಾರಣವಾಗಲಿದೆ.

ಯಹೂದಿ ಧಾರ್ಮಿಕ ವ್ಯಕ್ತಿಗಳೂ ಸೈನ್ಯದ ಸೇವೆಗೆ ಸೇರ್ಪಡೆಯಾಗಬೇಕೆಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿತ್ತು. ನಂತರದಲ್ಲಿ ಸೈನ್ಯ ಸಂಪ್ರದಾಯವಾದಿಗಳ ನೇಮಕಕ್ಕೆ ಮುಂದಾಗಿದೆ.

ಬಹುತೇಕ ಯಹೂದಿ ಪುರುಷರಿಗೆ ಸೈನ್ಯದ ಸೇವೆ ಕಡ್ಡಾಯವಾಗಿದೆ. ಆದರೆ ಕಟ್ಟಾ ಸಂಪ್ರದಾಯವಾದಿಗಳಿಗೆ ಇದರಿಂದ ವಿನಾಯಿತಿ ನೀಡಲಾಗಿತ್ತು. ಸಾಕಷ್ಟು ದಿನಗಳಿಂದ ಇದೇ ರಾಜಕೀಯ ವ್ಯವಸ್ಥೆ ಜಾರಿಯಲ್ಲಿತ್ತು.

ಆದರೆ ಇಸ್ರೇಲ್ 9 ತಿಂಗಳಿಗೂ ಹೆಚ್ಚು ಕಾಲ ಹಮಾಸ್ ಉಗ್ರರ ವಿರುದ್ಧ ಹೋರಾಟ ನಡೆಸುತ್ತಿದೆ. ಇಂತಹ ಸಂದರ್ಭದಲ್ಲಿ ಕಟ್ಟಾ ಸಂಪ್ರದಾಯವಾದಿಗಳಿಗೆ ವಿನಾಯಿತಿ ನೀಡಿರುವುದು ಸಾರ್ವಜನಿಕರಲ್ಲಿ ಅಸಮಾಧಾನಕ್ಕೆ ಕಾರಣವಾಗಿತ್ತು. ಕಟ್ಟಾ ಸಂಪ್ರದಾಯದ ಪುರುಷರನ್ನು ಯಾವಾಗಿನಿಂದ ಸೈನ್ಯಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗುವುದು ಎಂಬ ಬಗ್ಗೆ ಸೈನ್ಯ ತಿಳಿಸಿಲ್ಲ.

ಯಹೂದಿ ಧಾರ್ಮಿಕ ಸ್ಥಳಗಳಲ್ಲಿ ಅಧ್ಯಯನ ಮಾಡುವ ಧಾರ್ಮಿಕ ವ್ಯಕ್ತಿಗಳಿಗೆ ಸೈನ್ಯದ ಸೇವೆಯಿಂದ ವಿನಾಯಿತಿ ನೀಡುವುದು ಪಕ್ಷಪಾತಿ ಎಂದು ಸುಪ್ರೀಂ ಕೋರ್ಟ್ ಆದೇಶದಲ್ಲಿ ತಿಳಿಸಲಾಗಿತ್ತು.

ಧಾರ್ಮಿಕ ಅಧ್ಯಯನ ಮಾಡುವುದು ಸಹ ದೇಶದ ಭವಿಷ್ಯಕ್ಕೆ ಮುಖ್ಯವಾಗಿದೆ ಎಂದು ತೀವ್ರ ಸಂಪ್ರದಾಯವಾದಿ ನಾಯಕರು ಪ್ರತಿಪಾದಿಸಿದರು.

ಸೈನ್ಯದಲ್ಲಿ ಸೇವೆ ಮಾಡಲು ಮುಂದಾದರೆ ಪೀಳಿಗೆಗಳಿಂದ ಪಾಲಿಸಿಕೊಂಡು ಬಂದಿರುವ ಹಳೆಯ ಜೀವನ ಶೈಲಿಗೆ ಅಡ್ಡಿಯಾಗಲಿದೆ ಎಂದು ತಿಳಿಸಲಾಗಿತ್ತು. ಸರ್ಕಾರ ತೀವ್ರ ಸಂಪ್ರದಾಯವಾದಿ ಪಕ್ಷಗಳ ಬೆಂಬಲವನ್ನು ಆಧರಿಸಿದೆ. ಇವರು ಸೈನ್ಯ ಸೇರ್ಪಡೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಮುಂದೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು ಎಂಬುದನ್ನು ಧಾರ್ಮಿಕ ನಾಯಕರು ಇನ್ನೂ ಬಹಿರಂಗಪಡಿಸಿಲ್ಲ. ಅವರು ಮೈತ್ರಿ ಸರ್ಕಾರದಿಂದ ಹೊರ ನಡೆದರೆ ಪತನಗೊಳ್ಳಲಿದೆ. ಎರಡು ವರ್ಷ ಮೊದಲೇ ಚುನಾವಣೆ ನಡೆಸುವ ಪರಿಸ್ಥಿತಿ ಎದುರಾಗಲಿದೆ.

ಸೈನ್ಯದ ಘೋಷಣೆಯಿಂದ ಇಸ್ರೇಲ್‌ನಲ್ಲಿ ಅಶಾಂತಿ ಉಂಟಾಗಬಹುದು. ಈ ಹಿಂದೆಯೂ ತೀವ್ರ ಸಂಪ್ರದಾಯವಾದಿಗಳನ್ನು ಸೈನ್ಯಕ್ಕೆ ಸೇರ್ಪಡೆ ಮಾಡಿಕೊಳ್ಳುವುದರ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು.

## ಮೀಸಲಾತಿ ವಿರೋಧಿಸಿ ವಿದ್ಯಾರ್ಥಿಗಳ ಪ್ರತಿಭಟನೆ

**(1ನೇ ಪುಟದಿಂದ)** ಬಾಂಗ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರ ಕುಟುಂಬದವರಿಗೆ ಉದ್ಯೋಗದಲ್ಲಿ ಶೇ.30ರ ಮೀಸಲಾತಿ ಕಲ್ಪಿಸಲಾಗಿದೆ. ಈ ಮೀಸಲಾತಿ ಪಕ್ಷಪಾತಿಯಾಗಿದೆ, ಇದನ್ನು ರದ್ದುಗೊಳಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಹಾಗೂ ಆಡಳಿತಾರೂಢ ಅವಾಮಿ ಲೀಗ್‌ನ ವಿದ್ಯಾರ್ಥಿ ವಿಭಾಗದ ಕಾರ್ಯಕರ್ತರ ನಡುವೆ ಘರ್ಷಣೆ ಸಂಭವಿಸಿದೆ. ಈ ಘರ್ಷಣೆಯಲ್ಲಿ ಮೂವರು ವಿದ್ಯಾರ್ಥಿಗಳು ಹಾಗೂ ಓರ್ವ ಪಾದಚಾರಿ ಸಾವನ್ನಪ್ಪಿದ್ದಾರೆ.

# ಭದ್ರಾ ಜಲಾಶಯಕ್ಕೆ ಹೆಚ್ಚಿದ ಒಳಹರಿವು



**(1ನೇ ಪುಟದಿಂದ)** ನೀರನ್ನು ತುಂಗಾ ನದಿಗೆ ಬಿಟ್ಟಿರುವುದರಿಂದ ಉಕ್ಕಡಗಾತ್ರಿ ಬಳಿ ತುಂಗ ಭದ್ರಾ ನದಿ ಅಪಾಯಮಟ್ಟ ಮೀರಿ ಹರಿಯುತ್ತಿದೆ. ಇದರಿಂದಾಗಿ ಉಕ್ಕಡಗಾತ್ರಿ-ಪತ್ತೇಪುರ ಸಂಪರ್ಕ ಸೇತುವೆ ನದಿ ಹಿನ್ನೀರಿನಲ್ಲಿ ಮುಳುಗಡೆ ಆಗಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿದೆ. ಅಲ್ಲದೇ, ನೂರಾರು ಎಕರೆ ತೋಟ, ಗದ್ದೆಗಳು ನದಿ ಹಿನ್ನೀರಿನಲ್ಲಿ ಮುಳುಗಡೆ ಆಗಿವೆ.

# ನಾಲೆಗಳಿಗೆ ಪಂಪ್‌ಸೆಟ್ ಅಳವಡಿಕೆಗೆ ತಡೆ

**(1ನೇ ಪುಟದಿಂದ)** ನೀರು ತುಂಬಿಸುವ ಕಾಮಗಾರಿಗೆ 2020ರಲ್ಲೇ 1281.80 ಕೋಟಿ ರೂ. ವೆಚ್ಚದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು. ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ದ್ವಾರಸಮುದ್ರ ಮತ್ತು ಇತರೆ ಆರು ಕೆರೆಗಳನ್ನು, ಚಿಕ್ಕಮಗಳೂರು ತಾಲ್ಲೂಕಿನ ಬೆಳವಾಡಿ ಕೆರೆಯನ್ನು ರಣಘಟ್ಟ ತಿರುವಿನಿಂದ ಕೆರೆ ತುಂಬಿಸುವ ಕಾಮಗಾರಿಯನ್ನು 1125.46 ಕೋಟಿ ರೂ. ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ದೊರೆತಿದೆ. 2ನೇ ಹಂತದ ಕಾಮಗಾರಿಯನ್ನು ಹೊಸ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವುದಾಗಿ ಭರವಸೆ ನೀಡಿದರು.

**ಭಾವಪೂರ್ಣ ಶ್ರದ್ಧಾಂಜಲಿ**



ಶಿವಪ್ರಕಾಶ್ & ಅಸೋಸಿಯೇಟ್ಸ್ ಮಾಲೀಕರೂ,
ಹಿರಿಯ ಲೆಕ್ಕ ಪರಿಶೋಧಕರೂ ಆದ
**ಶ್ರೀ ಶಿವಪ್ರಕಾಶ್ ಜಿ.ಬಿ.**
ಅವರು ದಿನಾಂಕ 16-7-2024ರಂದು ನಿಧನರಾಗಿದ್ದು,
ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
**ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು**
**ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘ**

## ನಗರದಲ್ಲಿ ಅಪರಿಚಿತ ವ್ಯಕ್ತಿಯ ಸಾವು

ದಾವಣಗೆರೆ, ಜು. 16 - ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸುಮಾರು 45-48 ವರ್ಷ ವಯಸ್ಸಿನ ವ್ಯಕ್ತಿಯೋರ್ವನ ಶವ ಪತ್ತೆಯಾಗಿದೆ. ಈತ ಕಪ್ಪು ತಲೆ ಕೂದಲು ಹೊಂದಿದ್ದು, ಡಿಸ್ಟಂಪರ್ ಬಣ್ಣದ ಅಂಗಿ, ಹಸಿರು ಬಣ್ಣದ ಪಟ್ಟಿ ಪಟ್ಟಿ ಕಲರ್ ಪಂಚೆ, ನೀಲಿ ಮತ್ತು ಬಿಳಿ ಬಣ್ಣದ ಟವೆಲ್ ಧರಿಸಿರುತ್ತಾನೆ. ಸಂಬಂಧಪಟ್ಟವರು ದಾವಣಗೆರೆ ಕಂಟ್ರೋಲ್ ರೂಂ 08192 253 100, ಪೊಲೀಸ್ ಠಾಣೆ ನಂ. 08192 272012ಗೆ ಸಂಪರ್ಕಿಸಬಹುದು.

## ಕರ್ನಾಟಕದಲ್ಲಿ ಮುಸ್ಲಿಮರಿಗೆ ಹಿಂದುಳಿದ ವರ್ಗಗಳ ಮೀಸಲಾತಿ

**ಷಾ ಆಕ್ಷೇಪ**

ಮಹೇಂದ್ರನಗರ (ಹರಿಯಾಣ), ಜು. 16 - ಕಾಂಗ್ರೆಸ್ ಪಕ್ಷ ಹಿಂದುಳಿದ ವರ್ಗಗಳ ವಿರೋಧಿಯಾಗಿದೆ ಎಂದು ಆರೋಪಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ, ಹರಿಯಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗಗಳ ಮೀಸಲಾತಿ ಕಸಿದು ಮುಸ್ಲಿಮರಿಗೆ ನೀಡಲಿದೆ ಎಂದು ಆರೋಪಿಸಿದ್ದಾರೆ.

ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಮಾತನಾಡಿದ ಅಮಿತ್ ಷಾ, ಕರ್ನಾಟಕದಲ್ಲಿ ಕಾಂಗ್ರೆಸ್ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಕಸಿದು ಅದನ್ನು ಮುಸ್ಲಿಮರಿಗೆ ನೀಡಲಿದೆ. ಹರಿಯಾಣದಲ್ಲಿ ಅಧಿಕಾರಕ್ಕೆ ಬಂದರೂ ಅದೇ ಆಗಲಿದೆ ಎಂದು ಹೇಳಿದರು. ಹರಿಯಾಣದಲ್ಲಿ ಮುಸ್ಲಿಮರು ಮೀಸಲಾತಿ ಪಡೆಯಲು ಬಿಜೆಪಿ ಅವಕಾಶ ನೀಡುವುದಿಲ್ಲ. ನಾವು ಹಿಂದುಳಿದ ವರ್ಗಗಳ ಹಕ್ಕುಗಳನ್ನು ರಕ್ಷಿಸುತ್ತೇವೆ ಎಂದು ಅಮಿತ್ ಷಾ ಹೇಳಿದರು.

## ರಸ್ತೆ ಅಪಘಾತದಲ್ಲಿ ರಾಜನಹಳ್ಳಿ ಸ್ವಾಮೀಜಿ ಕಾರು ಚಾಲಕನ ಸಾವು



ಮಲೇಬೆನ್ನೂರು, ಜು.16- ನಿನ್ನೆ ನಡೆದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳ ವಾಹನ ಚಾಲಕ ನಾಗಯ್ಯ (38) ಚಿಕಿತ್ಸೆ ಫಲಕಾರಿಯಾಗದೇ ಇಂದು ಬೆಳಗ್ಗೆ ದಾವಣಗೆರೆಯ ಎಸ್.ಎಸ್.ಆಸ್ಪತ್ರೆಯಲ್ಲಿ ನಿಧನರಾದರು. ಹರಿಹರ ನಗರದ ಮುಖ್ಯ ರಸ್ತೆಯನ್ನು ದಾಟುವಾಗ ಆಕಸ್ಮಿಕವಾಗಿ ಕೆಎಸ್‌ಆರ್‌ಟಿಸಿ ಬಸ್‌ಗೆ ಸಿಲುಕಿ ನಾಗಯ್ಯ ಗಾಯಗೊಂಡಿದ್ದರು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಶಿರಸಿ ಸಮೀಪದ ಅವರ ಸ್ವಗ್ರಾಮದಲ್ಲಿ ಇಂದು ರಾತ್ರಿ ರಾಜನಹಳ್ಳಿ ಶ್ರೀಗಳ ಮತ್ತು ಮಡಿವಾಳ ಶ್ರೀಗಳ ಸಾನಿಧ್ಯದಲ್ಲಿ ನೆರವೇರಿತು.

## ವಿದ್ಯಾರ್ಥಿ ಜೀವನ ಅತ್ಯಂತ ಪವಿತ್ರ, ಸುಂದರ



ದಾವಣಗೆರೆ, ಜು. 16 - ವಿದ್ಯಾರ್ಥಿ ಜೀವನ ಅತ್ಯಂತ ಪವಿತ್ರವು ಸುಂದರವೂ ಆಗಿರುತ್ತದೆ. ವಿದ್ಯಾರ್ಥಿ ದೆಸೆಯಲ್ಲಿ ಪ್ರತಿಯೊಬ್ಬರೂ ತಮ್ಮದೇ ಆದ ನಿಶ್ಚಿತ ಗುರಿಯೊಂದಿಗೆ ಅಭ್ಯಾಸ ಮಾಡಿದಾಗ ಸುಲಭವಾಗಿ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅಭಿಪ್ರಾಯಪಟ್ಟರು.

ನಗರದ ಮುದೇಗೌಡ್ರ ಮಲ್ಲಮ್ಮ ಮುರಿಗೆಪ್ಪ ಬಾಲಕಿಯರ ಪ್ರೌಢಶಾಲೆ, ಶ್ರೀ ತರಳಬಾಳು ಜಗದ್ಗುರು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಮುದೇಗೌಡ್ರ ದ್ರಾಕ್ಷಾಯಣಮ್ಮ ಷಡಕ್ಷರಿ ಯಪ್ಪ ನರ್ಸರಿ ಶಾಲೆಗಳ 2024-25ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಅಭ್ಯಾಸಕ್ಕೆ ಹಿಂದೆ ಗುರು, ಮುಂದೆ ಗುರಿ ಇದ್ದಾಗ ಮಾತ್ರ ಸಾಧನೆಗೆ ಪೂರಕವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಕಠಿಣ ಶ್ರಮದ ಜೊತೆಗೆ ಆದರ್ಶ ವ್ಯಕ್ತಿಗಳ ಜೀವನ ಅಧ್ಯಯನದಿಂದ ಉನ್ನತ ಸಾಧನೆಗಳಿಗೆ ಕಾರಣವಾಗುತ್ತದೆ ಎಂದು ಹೇಳಿದರು.

ಕಡು ಬಡತನದಲ್ಲಿ ಹುಟ್ಟಿದ ರಾಷ್ಟ್ರದ ಉನ್ನತ ಪದವಿ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದ ಎಪಿಜೆ ಅಬ್ದುಲ್ ಕಲಾಂ ಮತ್ತು ಡಾ. ಸರ್. ಎಂ. ವಿಶ್ವೇಶ್ವರಯ್ಯ ಅವರ ಸಂಕ್ಷಿಪ್ತ ಜೀವನ ಮತ್ತು ಸಾಧನೆಯನ್ನು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಿ, ತಾವುಗಳೂ ಸಹ ಅಂತಹ ಸಾಧಕರಾಗಬೇಕೆಂದು ತಿಳಿಸಿದರು. ಕಲಿಕೆಗೆ ಯಾವುದೇ ಬಡತನ ಅಡ್ಡಿಯಾಗುವುದಿಲ್ಲ. ತಾವುಗಳು ಸಾಧನೆ ಇಲ್ಲದೇ ಸತ್ತರೆ ಅದು ಸಾವಿಗೆ ಅವಮಾನ ಎಂಬ ಮಾತಿದೆ. ಆ ಕಾರಣಕ್ಕಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಗುರುತರವಾದ ಸಾಧನೆ ಮಾಡುವ ಕನಸನ್ನು ಚಿಕ್ಕ ವಯಸ್ಸಿನಲ್ಲಿ ಹೊಂದಿರಿ ಎಂಬುದಾಗಿ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಡಜ್ಜಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎಲ್. ಪರಮೇಶ್ವರಪ್ಪ ಜಿಜಿಎಂಎಸ್ ಶಾಲೆಯ ಮುಖ್ಯ ಶಿಕ್ಷಕ ತಿಪ್ಪೇಸ್ವಾಮಿ ಎಸ್.ಹೆಚ್. ಶ್ರೀ ಬಂಕಾಪುರದ ನಂಜುಂಡಪ್ಪ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಆರ್. ಪರಮೇಶ್ವರಪ್ಪ ವಿಶ್ರಾಂತ ದೈಹಿಕ ಶಿಕ್ಷಕ ಬಿ. ಶಿವಪ್ಪ ಕೊಪ್ಪದ ಸಭೆಯನ್ನು ಉದ್ದೇಶಿಸಿ ಸಾಂದರ್ಭಿಕವಾದ ಹಿತ ನುಡಿಗಳನ್ನು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೌಢ ಶಾಲಾ ಮುಖ್ಯೋಪಾಧ್ಯಾಯ ಬಿ.ಎಚ್. ವಿರೂಪಾಕ್ಷಪ್ಪ ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರ ಮೂಲಕ ನಮ್ಮ ಸರ್ವತೋಮುಖ ಅಭಿವೃದ್ಧಿಗೆ ಕಾರಣಿ ಭೂತರಾಗಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಜಗದೀಶ್, ಕಾರ್ಯದರ್ಶಿ ಜಯಪ್ಪ, ದಿನೇಶ್ ಮತ್ತು ಇತರರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶಾಲಾ ಸಂಸತ್ತಿನ ಕಾರ್ಯದರ್ಶಿ ಕು. ಲಾವಣ್ಯ ನಿರೂಪಿಸಿದರು. ಪ್ರತಿನಿಧಿ ಕು. ಅಕ್ಷತಾ ವಂದಿಸಿದರು.

## ವಿಳಂಬ ಕಡತ, ತಾಳೆಯಾಗದ ಹೆಸರು, ವಿವರ ದಾಖಲಿಸಿರುವ ವೈದ್ಯರ ಮೇಲೆ ಕ್ರಮಕ್ಕೆ ಶಿಫಾರಸ್ಸು



**ದಾವಣಗೆರೆ ಜಿಲ್ಲೆಯಲ್ಲಿ 15.30 ಜನನ, 7.66 ಮರಣ ದರ : ಜಿಲ್ಲಾ ಮಟ್ಟದ ನಾಗರಿಕ ನೋಂದಣಿ ಪದ್ಧತಿಯ ಸಮನ್ವಯ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ**

ದಾವಣಗೆರೆ, ಜು. 16 - ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ 916, ನಗರದಲ್ಲಿ 20 ಸೇರಿದಂತೆ 936 ನಾಗರಿಕ ನೋಂದಣಿ ಜನನ, ಮರಣ ನೋಂದಣಿ ಘಟಕಗಳಿದ್ದು, ಜಿಲ್ಲೆಯಲ್ಲಿ 15.30 ಜನನ ಹಾಗೂ 7.66 ಮರಣ ದರ ಗುರುತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ನಡೆದ ಜಿಲ್ಲಾ ಮಟ್ಟದ ನಾಗರಿಕ ನೋಂದಣಿ ಪದ್ಧತಿಯ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನನ ದರವು ಪ್ರತಿ ಸಾವಿರ ಜನಸಂಖ್ಯೆಗೆ 15.30 ಮತ್ತು ಮರಣ ಪ್ರಮಾಣ ಪ್ರತಿ ಸಾವಿರ ಜನಸಂಖ್ಯೆಗೆ 7.66 ರಷ್ಟು ದರವಿದೆ. 2024 ರ ಜನವರಿಯಿಂದ ಜೂನ್‌ವರೆಗೆ 7367 ಗಂಡು, 6920 ಹೆಣ್ಣು ಹಾಗೂ 1 ತೃತೀಯ ಲಿಂಗ ಸೇರಿ 14288 ಜನನ ಪ್ರಕರಣ ನೋಂದಣಿಯಾಗಿದೆ. ಮತ್ತು ಇದೇ ಅವಧಿಯಲ್ಲಿ 4541 ಗಂಡು, 3448 ಹೆಣ್ಣು ಹಾಗೂ 1 ತೃತೀಯ ಲಿಂಗ ಸೇರಿ 7990 ಮರಣ ಪ್ರಕರಣಗಳು ಸಂಭವಿಸಿವೆ. 2024 ರ ಜನವರಿಯಿಂದ ಜೂನ್ ಅಂತ್ಯದವರೆಗೆ ತಡವಾಗಿ ನೋಂದಾಯಿಸಿದ ಜನನ ಪ್ರಕರಣಗಳಲ್ಲಿ 1565 ಗಂಡು, 1458 ಹೆಣ್ಣು ಸೇರಿ 3023, ಮರಣ ಪ್ರಕರಣಗಳಲ್ಲಿ 1781 ಗಂಡು, 1535 ಹೆಣ್ಣು ಸೇರಿ 3316 ನೋಂದಣಿ ಮಾಡಲಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ನಾಗರಿಕ ನೋಂದಣಿ ಪದ್ಧತಿಯಡಿ ಜು. 1 ರಿಂದ ಗ್ರಾಮ ಮಟ್ಟದಲ್ಲಿ ನೋಂದಣಾಧಿಕಾರಿಯಾಗಿ ಗ್ರಾಮ ಆಡಳಿತಾಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಉಪ ನೋಂದಣಾಧಿಕಾರಿಯಾಗಿರುತ್ತಾರೆ. 30 ದಿನಗಳೊಳಗಾಗಿ ಜನನ, ಮರಣ ಪ್ರಕರಣಗಳಲ್ಲಿ ನೋಂದಣಿ ಮಾಡಿ ಪ್ರಮಾಣ ಪತ್ರವನ್ನು ಸಾರ್ವಜನಿಕರಿಗೆ ನೀಡಲು ಅಧಿಕಾರ ನೀಡಲಾಗಿದೆ. ಮತ್ತು ಮಹಾನಗರ ಪಾಲಿಕೆ, ನಗರಪಾಲಿಕೆ, ನಗರಸಭೆ ವ್ಯಾಪ್ತಿಯಲ್ಲಿ ಸ್ಥಳೀಯ ಸಂಸ್ಥೆಗಳ ಆರೋಗ್ಯಾಧಿಕಾರಿಗಳು, ಪುರಸಭೆ ವ್ಯಾಪ್ತಿಯಲ್ಲಿ ಆರೋಗ್ಯ ನಿರೀಕ್ಷಕರು ನೋಂದಣಾಧಿಕಾರಿಗಳಾಗಿರುತ್ತಾರೆ. ಗ್ರಾಮೀಣ ಪ್ರದೇಶದ ಸರ್ಕಾರಿ ಸಂಸ್ಥೆಯ ವೈದ್ಯಾಧಿಕಾರಿಗಳು ಉಪ ನೋಂದಣಾಧಿಕಾರಿಗಳಾಗಿರುತ್ತಾರೆ. ನಗರ, ಪಟ್ಟಣ ಪ್ರದೇಶದಲ್ಲಿನ ಖಾಸಗಿ, ಸರ್ಕಾರಿ ಆಸ್ಪತ್ರೆಯಲ್ಲಿ ಜನನ, ಮರಣ ಪ್ರಕರಣಗಳಲ್ಲಿ ಇ-ಜನ್ಮ ತಂತ್ರಾಂಶದಲ್ಲಿ ನೋಂದಣಿ ಮಾಡಿ ದಾಖಲೆಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕು.

ಕೆಲವು ಆಸ್ಪತ್ರೆಗಳಲ್ಲಿ ಜನನ ಮತ್ತು ಮರಣ ಪ್ರಕರಣಗಳಲ್ಲಿ ಒಂದಕ್ಕೊಂದು ದಾಖಲೆಗಳು ತಾಳೆಯಾಗುತ್ತಿಲ್ಲ ಎಂಬ ದೂರುಗಳಿವೆ. ಇದರಿಂದ ಸಾರ್ವಜನಿಕರಿಗೆ ಹಾಗೂ ನ್ಯಾಯಾಲಯದಲ್ಲಿ ಅನಾವಶ್ಯಕ ಪ್ರಕರಣಗಳು ದಾಖಲಾಗುತ್ತಿವೆ. ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿನ ಜನನ ಮತ್ತು ಮರಣ ಅಂಕಿ ಅಂಶಗಳ ದಾಖಲೆಗಳನ್ನು ಸರಿಯಾಗಿ ಸ್ಥಳೀಯ ಸಂಸ್ಥೆಗೆ ಸಲ್ಲಿಸದ ಕಾರಣ ಇ-ಜನ್ಮ ತಂತ್ರಾಂಶದಲ್ಲಿ ಹೆಸರಿದ್ದರೆ, ಅದರ ದಾಖಲೆಗಳು ಲಭ್ಯವಿರುವುದಿಲ್ಲ ಮತ್ತು ಹೆಸರು ಮತ್ತು ಅವರ ಇತರೆ ದಾಖಲೆಗಳಿಗೆ ತಾಳೆಯಾಗದಿರುವುದರಿಂದ ತಿದ್ದುಪಡಿ ಮಾಡಲು ನ್ಯಾಯಾಲದಲ್ಲಿ ಆದೇಶ ಪಡೆಯಬೇಕಾಗುತ್ತದೆ. ತಿದ್ದುಪಡಿ ಪ್ರಕರಣಗಳು ಹೆಚ್ಚಿರುವುದರಿಂದ ನಗರಸಭೆಯಿಂದ ನ್ಯಾಯಾಲಯದ ಪ್ರತಿನಿಧಿಯಾಗಿ ವಕೀಲರು ಹಾಜರಾಗುವುದರಿಂದ ಇವರಿಗೆ ಪ್ರಕರಣಗಳ ಆಧಾರದಲ್ಲಿ ಗೌರವ ಧನ ಪಾವತಿಸಲಾಗುತ್ತಿದ್ದು, ಸ್ಥಳೀಯ ಸಂಸ್ಥೆಗೆ ಹೊರೆಯಾಗುವ ಜೊತೆಗೆ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿದೆ ಎಂದು ಅಧಿಕಾರಿಯವರು ಆಗುತ್ತಿರುವ ಸಮಸ್ಯೆ ಬಗ್ಗೆ ಸಭೆ ಗಮನಕ್ಕೆ ತಂದಾಗ ಜಿಲ್ಲಾಧಿಕಾರಿಯವರು ಈ ಬಗ್ಗೆ ಆರೋಗ್ಯ ಇಲಾಖೆ ಆಯುಕ್ತರಿಗೆ ಪತ್ರ ಬರೆಯಲು ತಿಳಿಸಿ ಎಲ್ಲಾ ಆರೋಗ್ಯಾಧಿಕಾರಿಗಳೊಂದಿಗೆ ಸಭೆ ನಡೆಸಿ ಸೂಕ್ತ ನಿರ್ದೇಶನ ನೀಡಲು ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ, ಉಪವಿಭಾಗಾಧಿಕಾರಿ ಅಭಿಷೇಕ್, ಜಿಲ್ಲಾ ಸಾಂಖ್ಯಿಕ ಅಧಿಕಾರಿ ನೀಲಾ ಎಸ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ತೆಲಂಗಾಣ ; ರಾವ್ ವಿರುದ್ಧದ ತನಿಖೆಯಲ್ಲಿ ವಿವಾದ : ಸುಪ್ರೀಂ ಕೋರ್ಟ್ ತರಾಟೆ ನಂತರ ಹಿಂದೆ ಸರಿದ ಆಯೋಗದ ಮುಖ್ಯಸ್ಥ

ನವದೆಹಲಿ, ಜು. 16 - ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಅವಧಿಯಲ್ಲಿ ನಡೆದಿದೆ ಎನ್ನಲಾದ ವಿದ್ಯುತ್ ವಲಯದ ಅವ್ಯವಹಾರಗಳ ಕುರಿತು ತನಿಖೆಗಾಗಿ ನೇಮಿಸಲಾಗಿರುವ ಏಕ ಸದಸ್ಯ ಆಯೋಗದ ಕಾರ್ಯನಿರ್ವಹಣೆಯನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಏಕವ್ಯಕ್ತಿ ಸದಸ್ಯ ಆಯೋಗದ ನಿವೃತ್ತ ನ್ಯಾಯಮೂರ್ತಿ ಎಲ್. ನರಸಿಂಹ ರೆಡ್ಡಿ ಅವರು ತನಿಖೆಯ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಬಗ್ಗೆ ಸುಪ್ರೀಂ ಕೋರ್ಟ್ ಆಕ್ಷೇಪಿಸಿದೆ. ಸುಪ್ರೀಂ ಕೋರ್ಟ್ ತರಾಟೆಯ ನಂತರ ಪಾಟ್ನಾ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ರೆಡ್ಡಿ ಅವರು ಆಯೋಗದಿಂದ ಹಿಂದೆ ಸರಿದಿದ್ದಾರೆ.

ಆಯೋಗಕ್ಕೆ ಬೇರೆಯವರನ್ನು ನೇಮಿಸುವಂತೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ತೆಲಂಗಾಣ ಸರ್ಕಾರಕ್ಕೆ ತಿಳಿಸಿದ್ದಾರೆ.

ನ್ಯಾಯಮೂರ್ತಿ ರೆಡ್ಡಿ ಅವರು ಪಕ್ಷಪಾತಿಯಾಗಿ ವರ್ತಿಸುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಚಂದ್ರಶೇಖರ ರಾವ್ ಆರೋಪಿಸಿ ದ್ದರು. ತನಿಖಾ ಆಯೋಗದ ಮುಖ್ಯಸ್ಥರಾಗಿ ರುವವರು ಪತ್ರಿಕಾಗೋಷ್ಠಿಯಲ್ಲಿ ಪ್ರಕರಣದ ಅರ್ಹತೆಯ ಬಗ್ಗೆ ನಿಲುವು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ನ್ಯಾಯ ದೊರೆಯಬೇಕಿದೆ. ಇವರನ್ನು ಬದಲಿಸಲು ತೆಲಂಗಾಣ ಸರ್ಕಾರಕ್ಕೆ ಅವಕಾಶ ನೀಡುತ್ತಿದ್ದೇವೆ ಎಂದು ಸುಪ್ರೀಂ ಕೋರ್ಟ್ ತಿಳಿಸಿತು.

ತೆಲಂಗಾಣದ ರೇವಂತ್ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ಈ ಪ್ರಕರಣದಲ್ಲಿ ಯಾವುದೇ ಪಕ್ಷಪಾತವಾಗಿಲ್ಲ ಎಂದು ಹೇಳಿದರು. ಆದರೆ, ತನಿಖೆ ಆರಂಭವಾಗುವ ಮೊದಲೇ ಮಾಜಿ ನ್ಯಾಯಮೂರ್ತಿಗಳು ಪ್ರಕರಣದ ಅರ್ಹತೆ ಬಗ್ಗೆ ಮಾತನಾಡಬಾರದಿತ್ತು ಎಂದು ಪೀಠ ಅಭಿಪ್ರಾಯ ಪಟ್ಟಿದೆ.

ನ್ಯಾಯಮೂರ್ತಿ ರೆಡ್ಡಿ ಅವರ ಪರವಾಗಿ ಸುಪ್ರೀಂ ಕೋರ್ಟ್ ನಲ್ಲಿ ಹಾಜರಿದ್ದ ಹಿರಿಯ ವಕೀಲ ಗೋಪಾಲ ಶಂಕರನಾರಾಯಣನ್ ಅವರು ಹೇಳಿಕೆ ನೀಡಿ, ನ್ಯಾಯಮೂರ್ತಿ ರೆಡ್ಡಿ ಅವರು ಆಯೋಗದಲ್ಲಿ ಮುಂದುವರೆಯುವ ಉದ್ದೇಶ ಹೊಂದಿಲ್ಲ ಎಂದು ಹೇಳಿದರು.

## ಮುಂಗಾರು ಹಂಗಾಮಿಗೆ ವಿಮಾ ಕಂತು ಪಾವತಿಸಲು ಸೂಚನೆ

ದಾವಣಗೆರೆ, ಜು. 16 - ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಬೆಳೆ ಸಾಲ ಪಡೆದ, ಪಡೆಯದ ರೈತರು ನೋಂದಾಯಿಸಿಕೊಳ್ಳಲು ತಿಳಿಸಲಾಗಿದೆ.

ಬೆಳೆ ಸಾಲ ಪಡೆದ ರೈತರು ಬೆಳೆ ಸಾಲ ಮಂಜೂರು ಮಾಡುವಾಗ, ಕಡ್ಡಾಯವಾಗಿ ಬೆಳೆ ವಿಮೆಗೆ ಒಳಪಡಿಸಲಾಗುವುದು, ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ, ಖಾತೆ ಪುಸ್ತಕ, ಪಾಸ್ ಪುಸ್ತಕ, ಕಂದಾಯ ರಶೀದಿ ಹಾಗೂ ಆಧಾರ್ ಸಂಖ್ಯೆಯನ್ನು ನೀಡಿ ಹತ್ತಿರದ ಬ್ಯಾಂಕ್, ಆರ್ಥಿಕ ಸಂಸ್ಥೆಗಳು ಅಥವಾ ಸಾಮಾನ್ಯ ಸೇವಾಕೇಂದ್ರಗಳಲ್ಲಿವಿಮಾಕಂತುಪಾವತಿಸಿನೋಂದಾಯಿಕೊಳ್ಳಬಹುದಾಗಿದೆ.

ಮುಸುಕಿನ ಜೋಳ (ನೀರಾವರಿ) (ಮಳೆ ಆಶ್ರಿತ), ಭತ್ತ (ನೀರಾವರಿ), ಜೋಳ (ಮಳೆ ಆಶ್ರಿತ), ಜೋಳ (ನೀರಾವರಿ), ರಾಗಿ (ಮಳೆ ಆಶ್ರಿತ), ರಾಗಿ (ನೀರಾವರಿ), (ಮಳೆ ಆಶ್ರಿತ), ನವಣೆ (ಮಳೆ ಆಶ್ರಿತ), ತೊಗರಿ (ಮಳೆ ಆಶ್ರಿತ), ಶೇಂಗಾ (ಮಳೆ ಆಶ್ರಿತ), ಶೇಂಗಾ (ನೀರಾವರಿ), ಸಜ್ಜೆ (ಮಳೆ ಆಶ್ರಿತ), ಹುರುಳಿ (ಮಳೆ ಆಶ್ರಿತ) ರೈತರು ಜುಲೈ 31 ರೊಳಗಾಗಿ ವಿಮಾ ನೊಂದಣಿ ಮಾಡಿಸಲು ಕೊನೆ ದಿನವಾಗಿರುತ್ತದೆ. ಸೂರ್ಯಕಾಂತಿ (ಮಳೆ ಆಶ್ರಿತ), ಸೂರ್ಯಕಾಂತಿ (ನೀರಾವರಿ) ಈ ಬೆಳೆಗಳಿಗೆ ಆಗಸ್ಟ್ 16 ರವರೆಗೆ ಅವಕಾಶವಿರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ವಿದ್ಯಾರ್ಥಿಗಳ ದಾಖಲಾತಿಗಾಗಿ ಮನೆಗಳಿಗೆ ತೆರಳಿದ ಉಪನ್ಯಾಸಕರು



**ಮಲೇಬೆನ್ನೂರು**

ಮಲೇಬೆನ್ನೂರು ಜು,16- ಕುಂಬಳೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯು ತರಗತಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಕಾಲೇಜಿನ ಉಪನ್ಯಾಸಕರು ಮತ್ತು ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಮನೆಗಳಿಗೆ ತೆರಳಿದ ಘಟನೆ ನಡೆದಿದೆ.

ಹತ್ತನೇ ತರಗತಿಯ ಫಲಿತಾಂಶ ಕಡಿಮೆಯಾದ ಹಿನ್ನೆಲೆಯಲ್ಲಿ ಪ್ರಥಮ ಪಿಯು ತರಗತಿಗೆ ದಾಖಲಾತಿ ಕೊರತೆಯಾಗಿದ್ದು, ಎಸ್‌ಎಸ್‌ಎಲ್‌ಸಿ ಫಲಿತಾಂಶ-2 ಪ್ರಕಟವಾದ ಹಿನ್ನೆಲೆಯಲ್ಲಿ ಜಿಗಳಿ, ಗುಡ್ಡದ ಬೇವಿನಹಳ್ಳಿ, ನಿಟ್ಟೂರು ಮತ್ತು ಕುಂಬಳೂರು ಗ್ರಾಮಗಳ ಯೋಗೀಶ್, ವಜ್ರ, ಮಾರುತಿ, ಶರತ್, ಭಾಗ್ಯ, ನಯನ, ಗಂಗಾ ಎಂಬ ವಿದ್ಯಾರ್ಥಿಗಳ ಮನೆಗೆ ತೆರಳಿ ಕಾಲೇಜು ಇಲಾಖೆಯ ಸೌಲಭ್ಯಗಳನ್ನು ತಿಳಿಸಿ ಮನವೊಲಿಸಿದರು.

ಪ್ರಭಾರ ಪ್ರಾಂಶುಪಾಲ ಹನುಮಂತಯ್ಯ, ಉಪನ್ಯಾಸಕರಾದ ಮರುಳಸಿದ್ದಪ್ಪ, ಲತಾ, ಸಿಬಿಸಿ ಸದಸ್ಯರಾದ ಎನ್. ಕಲ್ಲೇಶ್ ಬಾಬು, ಬೆನ್ನೂರು ರಮೇಶ್, ಹೆಚ್.ಎಂ.ಸದಾನಂದ, ವೈ. ಶ್ರೀನಿವಾಸಮೂರ್ತಿ ಮತ್ತಿತರರು ಈ ತಂಡದಲ್ಲಿದ್ದರು. 2018ರಲ್ಲಿಯೂ ಪ್ರಥಮ ಪಿಯುಗೆ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾದಾಗಲೂ ಇದೇ ತಂಡ ಪಾದಯಾತ್ರೆ ನಡೆಸಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚು ಮಾಡಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

## ನಗರದಲ್ಲಿ ಇಂದು ಅನಂತ ಚೇತನ ಪರಿವಾರ ಉದ್ಘಾಟನೆ

ಜೀವನೋತ್ಸಾಹ ಚಿರವಾಗಿರಲಿ ಎಂಬ ಸದುದ್ದೇಶದಿಂದ ಆರೋಗ್ಯ, ಪ್ರಕೃತಿ, ಸಂಸ್ಕೃತಿ, ಕೌಶಲ್ಯ, ಮನೋಲ್ಲಾಸ ಹೀಗೆ ವಿವಿಧ ಸಾಮಾಜಿಕ ಕಾಳಜಿಯ 'ಅನಂತ ಚೇತನ ಪರಿವಾರ' ಸಂಸ್ಥೆಯು ಇಂದು ಸಂಜೆ 4 ಗಂಟೆಗೆ ಶ್ರೀ ಸದ್ಯೋಜ್ಯಾತ ಶಿವಾಚಾರ್ಯ ನಿಕೇತನ ಹಿರೇಮಠ ಸಭಾಂಗಣದಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಸಂಸ್ಥೆಯ ಮುಖ್ಯ ಸಂಚಾಲಕರಾದ ಶ್ರೀಮತಿ ಸುಮ ಸದಾನಂದ ತಿಳಿಸಿದ್ದಾರೆ.

ಸಂಸ್ಥೆಯ ಉದ್ಘಾಟನೆಯನ್ನು ಹರಿಹರ ಎಂ.ಕೆ.ಇ.ಟಿ. ಡೀನ್ ಡಾ. ಬಿ.ಟಿ.ಅಚ್ಯುತ್ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಲಾಕುಂಚ ಯಕ್ಷರಂಗ ಸಂಸ್ಥೆಗಳ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಆಗಮಿಸಲಿದ್ದಾರೆ. ಅನಂತ ಚೇತನ ಪರಿವಾರದ ಸಂಸ್ಥಾಪಕರಾದ ಡಾ. ಆರತಿ ಸುಂದರೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ ಎಂದು ಸಂಸ್ಥೆಯ ಸಮಿತಿ ಸದಸ್ಯರಾದ ಶ್ರೀಮತಿ ಹೇಮಾ ರುದ್ರಮುನಿ ತಿಳಿಸಿದ್ದಾರೆ.

## ದಾಮ್ ಕೋಸ್ ಉಪಾಧ್ಯಕ್ಷರಾಗಿ ಹೆಚ್. ಜಿ. ಮಲ್ಲಿಕಾರ್ಜುನ



ದಾವಣಗೆರೆ,ಜು.16- ದಾವಣಗೆರೆ ಅಡಿಕೆ ಅಭಿವೃದ್ಧಿ ಪರಿಷ್ಕರಣ ಮತ್ತು ಮಾರಾಟ ಸಹಕಾರ ಸಂಘದ (ದಾಮ್ ಕೋಸ್) ಉಪಾಧ್ಯಕ್ಷರಾಗಿ ಹನುಮನಹಳ್ಳಿಯ ಹೆಚ್.ಜಿ. ಮಲ್ಲಿಕಾರ್ಜುನ ಅವರು ನಿನ್ನೆ ನಡೆದ ಸಂಘದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಬಿ.ಕೆ. ಶಿವಕುಮಾರ್ ಇತರರು ಉಪಸ್ಥಿತರಿದ್ದರು.

## ದಾನ ಬದುಕನ್ನು ಸುಂದರಗೊಳಿಸುತ್ತದೆ

**ತುಮ್ಮಿನಕಟ್ಟೆ ಗ್ರಾಮದ ಕಾರ್ಯಕ್ರಮದಲ್ಲಿ ಪದ್ಮಸಾಲಿ ಪೀಠದ ಸದಾನಂದ ಶ್ರೀಗಳು**

ರಾಣೇಬೆನ್ನೂರು, ಜು. 16 - ದಾನ ಮಾಡುವುದು, ಸ್ವೀಕರಿಸುವುದು ಆರೋಗ್ಯಕರ ಸಮಾಜದ ಅವಿಭಾಜ್ಯ ಅಂಗ, ಅಲ್ಲಿ ಪ್ರೀತಿ, ಮಮಕಾರ, ಸಂತೃಪ್ತಿ, ನೆಮ್ಮದಿ ಎಲ್ಲ ಇದೆ. ದಾನ ಮಾಡುವುದರಿಂದ ಬದುಕು ಸುಂದರಮಯವಾಗಿ ರೂಪಗೊಳ್ಳಲಿದೆ ಎಂದು ಮಾರ್ಕಂಡೇಶ್ವರ ಪದ್ಮಸಾಲಿ ಪೀಠದ ಶ್ರೀ ಸದಾನಂದ ಮಹಾಸ್ವಾಮಿಗಳು ನುಡಿದರು.

ಶ್ರೀ ಗಳು ತಾಲ್ಲೂಕಿನ ತುಮ್ಮಿನಕಟ್ಟಿ ಗ್ರಾಮದ ಶ್ರೀ ಸಂಗಮೇಶ್ವರ ಪ್ರೌಢಶಾಲೆಯಲ್ಲಿ ಸಣ್ಣ ಸಂಗಾಪುರದ ಮಂಜಯ್ಯ ಚಾವಡಿ ಗೆಳೆಯರು ಸೇರಿ ಗ್ರಾಮದ ಎಲ್ಲ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಿಸಿದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು.

ಇದೇ ಶಾಲೆಯಲ್ಲಿ ಕಲಿತು ಬದುಕನ್ನು ಸುಂದರವಾಗಿ ಕಟ್ಟಿಕೊಂಡ ಮಂಜಯ್ಯ ಅವರು ನೋಟ್ ಬುಕ್ ಗಳನ್ನು ದಾನಮಾಡಿ ಸಂಸ್ಥೆಯ ಹಾಗೂ ಕಲಿಸಿದ ಗುರುಗಳ ಪ್ರೀತಿ ಗಳಿಸಿದರು, ನಾವು ನಿಮಗೆ ಹಿತ ನುಡಿಗಳನ್ನು ಹೇಳವಂತೆ, ನೀವೂ ಸಹ ಉತ್ತಮ ಪ್ರಜೆಗಳಾಗಿ ಮುಂದಿನ ದಿನಗಳಲ್ಲಿ ಮತ್ತೊಬ್ಬರಿಗೆ ಸಹಾಯ, ಸಹಕಾರ ನೀಡುವಂತಹ ಬದುಕು ನಿಮ್ಮದಾಗಲಿ ಎಂದು ಮಾತನಾಡಿದ ಗ್ರಾ.ಪಂ. ಅಧ್ಯಕ್ಷ ಮಂಜುನಾಥ ಹೊನ್ನಾಳಿ, ಜಿ.ಪಂ. ಮಾಜಿ ಸದಸ್ಯ ಕೃಷ್ಣಪ್ಪ ಕಂಬಳಿ, ಸಂಗಮೇಶ್ವರ ವಿದ್ಯಾ ಸಂಸ್ಥೆ ಅಧ್ಯಕ್ಷ ಶೇಖಪ್ಪ ಬಣಕಾರ, ಕಾಂಗ್ರೆಸ್ ಅಧ್ಯಕ್ಷ ಅಪ್ಪು ಕಲಾಲ ಹೇಳಿದರು.

ಮಹೇಶ್ವರಯ್ಯ ಚಾವಡಿ, ನಿರ್ಮಲ ಚಾವಡಿ, ಪ್ರಾಚಾರ್ಯ ಎಸ್. ಎನ್. ಶೆಟ್ಟಿಕೇರಿ ಮಂಜಯ್ಯ ಚಾವಡಿ, ಕವಿತಾ ಚಾವಡಿ, ಮನೋಹರ, ಮಂಜಪ್ಪ ಕಂಬಳಿ ಮತ್ತಿತರರಿದ್ದರು. ಷಣ್ಮುಖ ಮಧ್ಯಾಹ್ನ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

## ನಾಳೆ ಸರಕು - ಸೇವಾ ತೆರಿಗೆ ಸೆಮಿನಾರ್

ದಾವಣಗೆರೆ, ಜು. 16 - ಜಿಲ್ಲಾ ಪ್ರಾಕ್ಟಿಷನರ್ಸ್ ಅಸೋಸಿಯೇಷನ್ ವತಿಯಿಂದ ನಗರದ ಚಾರ್ಟಡ್ ಅಕೌಂಟೆಂಟ್ಸ್ ಭವನದಲ್ಲಿ ನಾಡಿದ್ದು ದಿನಾಂಕ 18ರ ಗುರುವಾರ ಸರಕು ಮತ್ತು ಸೇವಾ ತೆರಿಗೆ ಕುರಿತು ಸೆಮಿನಾರ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಕಾರ್ಯದರ್ಶಿ ಜಿ. ಮಹಾಂತೇಶ್ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ ತಾಂತ್ರಿಕ ಸಭೆಯಲ್ಲಿ 53ನೇ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಬದಲಾವಣೆಗಳು ಮತ್ತು ವೀಕ್ಷಿಸಲು ಸಾಮಾನ್ಯ ದೋಷಗಳು ಕುರಿತು ಶ್ರೀಮತಿ ಅನ್ನಪೂರ್ಣ ಕಬ್ರ ಮಾತನಾಡುವರು. ಎರಡನೇ ತಾಂತ್ರಿಕ ಸಭೆಯಲ್ಲಿ ತೀರ್ಪು ಮತ್ತು ಮೇಲ್ಮನವಿ ಪ್ರಕ್ರಿಯೆಗಳ ತಯಾರಿ ಮತ್ತು ಫೈಲಿಂಗ್ ವಿಷಯದ ಬಗ್ಗೆ ರಾಜೇಶ್ ಕುಮಾರ್ ಟಿ.ಆರ್., ಮತ್ತು ಮೂರನೇ ತಾಂತ್ರಿಕ ಸಭೆಯಲ್ಲಿ ಮೌಲ್ಯಮಾಪನ, ಆಡಿಟ್, ವಿಚಾರಣೆ ಮತ್ತು ತನಿಖೆ ಹೇಗೆ ಎದುರಿಸುವುದು ಎಂದು ಸಿಎ ಜತಿನ್ ಅನಿಲ್ ಕ್ರಿಸ್ಟೋಫರ್ ತಿಳಿಸುವರು. ನಂತರ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷ ಹೆಚ್.ಟಿ. ಸುಧೀಂದ್ರ ರಾವ್ ವಹಿಸುವರು. ಹಿರಿಯ ಲೆಕ್ಕ ಪರಿಶೋಧಕ ಎ. ಎಸ್. ವೀರಣ್ಣ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಎಸ್. ಮಹಾಂತೇಶ್, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಎಚ್. ವೀರೇಂದ್ರ ಪಾಟೀಲ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಎನ್.ಎಸ್. ನಾಗಸ್ವಾಮಿ, ಕೇಂದ್ರ ತೆರಿಗೆಗಳ ಸಹಾಯಕ ಆಯುಕ್ತ ಸಿ.ತಿರುಮಲೈ ಮುತ್ತು ಅವರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## 28ಕ್ಕೆ ಮಾದಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು. 16- ಜಗಳೂರು ತಾಲ್ಲೂಕು ಮಾದಿಗ ಸಮಾಜದ ವತಿಯಿಂದ ಇದೇ ದಿನಾಂಕ 28 ರಂದು ಮಧ್ಯಾಹ್ನ 1 ಗಂಟೆಗೆ ಜಗಳೂರು ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಮಾದಿಗ ಸಮಾಜದ ಜಗಳೂರು ತಾಲ್ಲೂಕು ಅಧ್ಯಕ್ಷ ಎಂ. ಬಸವರಾಜ್ ಪಲ್ಲಾಗಟ್ಟೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 75 ರಷ್ಟು ಅಂಕ ಗಳಿಸಿದ ಜಗಳೂರು ತಾಲ್ಲೂಕು ಮಾದಿಗ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು. ರಾಜ್ಯಾಧ್ಯಕ್ಷ ಮಂಜುನಾಥ್ ಭದ್ರಾವತಿ, ಜಿಲ್ಲಾಧ್ಯಕ್ಷ ಹೆಚ್.ಸಿ. ಮಲ್ಲಪ್ಪ ಸೇರಿದಂತೆ ಇತರರು ಭಾಗವಹಿಸಲಿದ್ದಾರೆಂದರು. ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸುವ ಇದೇ ದಿನಾಂಕ 25 ರೊಳಗಾಗಿ 9731675844 ಗೆ ಕರೆ ಮಾಡಲು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಗಳೂರು ಮಾದಿಗ ಸಂಘದ ಸುಧಾ ಮತ್ತು ಶಶಿಕಲಾ ಉಪಸ್ಥಿತರಿದ್ದರು.

## ಕೆ.ಎಸ್. ವಿಜಯ್‌ಗೆ ಪಿಹೆಚ್‌ಡಿ



ದಾವಣಗೆರೆ, ಜು. 16- ನಗರದ ಬಾಪೂಜಿ ಬಿ-ಸ್ಕೂಲ್ಸ್‌ನ ಪ್ರಾಧ್ಯಾಪಕ ಕೆ.ಎಸ್. ವಿಜಯ್ ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯದಿಂದ ಪಿಹೆಚ್‌ಡಿ ಪದವಿ ನೀಡಲಾಗಿದೆ.

ದಾವಣಗೆರೆ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಜೆ.ಕೆ. ರಾಜು ಅವರ ಮಾರ್ಗದರ್ಶನದಲ್ಲಿ ವಿಜಯ್ ಅವರು ಮಂಡಿಸಿದ 'ರೋಲ್ ಆಫ್ ಅನಾಲಿಟಿಕ್ಸ್ ಇನ್ ಅಚೀವಿಂಗ್ ಬ್ಯುಸಿನೆಸ್ ಆಬ್ಜೆಕ್ಟಿವ್ಸ್ ಆಫ್ ಐಟಿ ಅಂಡ್ ಐಟಿಇಎಸ್ ಫರ್ಮ್ಸ್ ಇನ್ ಬೆಂಗಳೂರು' ಎಂಬ ಮಹಾಪ್ರಬಂಧಕ್ಕೆ ಈ ಪದವಿ ನೀಡಲಾಗಿದೆ.

## ನಗರದಲ್ಲಿ ನಾಳೆ ಹೈನುಗಾರಿಕೆ ತರಬೇತಿ

ದಾವಣಗೆರೆ, ಜು. 16 - ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಾಡಿದ್ದು ದಿನಾಂಕ 18 ಹಾಗೂ 19 ರಂದು ರೈತರಿಗೆ ಆಧುನಿಕ ಹೈನುಗಾರಿಕೆ ಚಟುವಟಿಕೆಗಳ ತರಬೇತಿ ನಡೆಯಲಿದ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಮುಖ್ಯ ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

## ಗಮನ ಬೇರೆಡೆ ಸೆಳೆದು ಹಣ ಕಳ್ಳತನ



**ಹರಿಹರ**

ಹರಿಹರ, ಜು. 16 - ನಗರದಲ್ಲಿ ಬ್ಯಾಂಕ್‌ನಿಂದ ಹಣ ಬಿಡಿಸಿಕೊಂಡು ಬರುವ ಸಾರ್ವಜನಿಕರ ಗಮನವನ್ನು ಬೇರೆಡೆ ಸೆಳೆದು ಹಣವನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿ, ಆರೋಪಿತನಿಂದ ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ನಿರೀಕ್ಷ ದೇವಾನಂದ್ ತಿಳಿಸಿದರು.

ಕಾಳಿದಾಸ ಬಡಾವಣೆಯ ರಾಮಚಂದ್ರಪ್ಪ ಪಿ.ಬಿ. ರಸ್ತೆಯ ಎಸ್.ಬಿ.ಐ ಬ್ಯಾಂಕ್ ನಿಂದ ದಿ 6.3.2024 ರಂದು 6 ಲಕ್ಷ ರೂ. ಹಣವನ್ನು ಬಿಡಿಸಿಕೊಂಡು ತಮ್ಮ ಬೈಕ್‌ನ ಸೈಡ್ ಬ್ಯಾಗ್‌ನಲ್ಲಿ ಇಟ್ಟುಕೊಂಡು ಹೋಗುವಾಗ ತಮಿಳುನಾಡಿನ ಮದುನ್ ಎಂಬಾತ ರಾಮಚಂದ್ರಪ್ಪನವರ ಗಮನಕ್ಕೆ ಬಾರದಂತೆ ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದ. ಈತನನ್ನು ನಿನ್ನೆ ಅನುಮಾನಾಸ್ಪದದ ಮೇಲೆ ಹಿಡಿದು ವಿಚಾರಣೆಗೊಳಪಡಿಸಿದಾಗ ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡಿದ್ದಾನೆ. ಆತನಿಂದ 2.50 ಲಕ್ಷ ನಗದು ಹಣ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಆರೋಪಿತನನ್ನು ಪತ್ತೆ ಮಾಡಲು ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ಜಿ.ಎಸ್. ಬಸವರಾಜ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಆರೋಪಿಯನ್ನು ಪತ್ತೆ ಮಾಡಿ ಹಣವನ್ನು ವಶಪಡಿಸಿಕೊಂಡ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಅಡಿಷನಲ್ ಎಸ್ಪಿ ವಿಜಯಕುಮಾರ್ ಸಂತೋಷ, ಮಂಜುನಾಥ್ ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.

ಈ ಸಂದರ್ಭದಲ್ಲಿ ಪಿಎಸ್‌ಐಗಳಾದ ಜಿ.ಎಸ್. ವಿಜಯಕುಮಾರ್, ಶ್ರೀಪತಿ ಗಿನ್ನಿ, ಎಎಸ್‌ಐ ಮೈಕೆಲ್ ಆಂಥೋನಿ, ಸಿಬ್ಬಂದಿಗಳಾದ ನಾಗರಾಜ್ ಸುಣಗಾರ್, ಆರ್ ರವಿ, ಹೆಚ್ ಸಿದ್ದೇಶ್, ಬಿ.ಎಸ್. ಹೇಮಾನಾಯ್ಕ್, ಕೆ.ಸಿ. ರುದ್ರಸ್ವಾಮಿ, ಹನುಮಂತ ಗೋಪನಾಳ, ಟಿ.ವಿ. ಸತೀಶ್, ಚಾಲಕ ರಂಗನಾಥ, ಜಿಲ್ಲಾ ಪೊಲೀಸ್ ಕಚೇರಿಯ ರಾಘವೇಂದ್ರ, ಶಾಂತರಾಜ್, ಮಜೀದ್, ರಾಘವೇಂದ್ರ, ಆಂಜನೇಯ, ರಮೇಶ್ ನಾಯ್ಕ್, ಬಾಲಾಜಿ ಇವರನ್ನೊಳಗೊಂಡ ತಂಡವು ಆರೋಪಿತನನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದೆ.

## ತೋಟಗಾರಿಕೆ ಇಲಾಖೆ : ಸಹಾಯ ಧನಕ್ಕೆ ಅರ್ಜಿ

**ಹರಪನಹಳ್ಳಿ**

ಹರಪನಹಳ್ಳಿ, ಜು.16- ತೋಟಗಾರಿಕೆ ಇಲಾಖೆಯಿಂದ ತಾಲ್ಲೂಕಿನಲ್ಲಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ಯೋಜನೆಗಳಡಿ ಸಹಾಯಧನ ಸೌಲಭ್ಯ ಪಡೆಯಲು ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಜಯಸಿಂಹ ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಹೊಸ ಪ್ರದೇಶ ವಿಸ್ತರಣೆಯಡಿ ಅಂಗಾಂಶ ಬಾಳೆ, ದಾಳಿಂಬೆ, ತರಕಾರಿ ಬೆಳೆಗಳು, ಸಮಗ್ರ ರೋಗ, ಕೀಟ ನಿಯಂತ್ರಣ, ನೀರು ಸಂಗ್ರಹಣಾ ಘಟಕ, ಪ್ಯಾಕ್ ಹೌಸ್, ಈರುಳ್ಳಿ ಶೇಖರಣೆ ಘಟಕ ಹಾಗೂ ಇತರೆ ಘಟಕಗಳಿಗೆ ಸಹಾಯಧನ ನೀಡಲಾಗವುದು.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಯಂತ್ರೋಪಕರಣ ಖರೀದಿಸಲು ಸಹಾಯಧನ ನೀಡಲಾಗುವುದು. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ದಾಳಿಂಬೆ, ನುಗ್ಗೆ ಮತ್ತು ಡ್ರ್ಯಾಗನ್ ಪ್ರೂಟ್ ಬೆಳೆಗೆ ಪ್ರದೇಶ ವಿಸ್ತರಣೆಗೆ ಸಹಾಯಧನ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಮಹಾತ್ಮಾ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ನೀರಾವರಿ ಸೌಕರ್ಯವಿರುವ ರೈತರ ಜಮೀನುಗಳಲ್ಲಿ ತೆಂಗು, ಮಾವು, ಸಪೋಟ, ಅಂಗಾಂಶ ಬಾಳೆ, ಅಂಜೂರ, ಪಪ್ಪಾಯಿ, ಪೇರಲ, ಹಾಗೂ ಇತರೆ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮ ಕೈಗೊಳ್ಳಬಹುದು.

ಈ ಎಲ್ಲಾ ಯೋಜನೆಗಳ ಸಹಾಯಧನ ಪಡೆಯಲು ಅರ್ಹ ಹಾಗೂ ಆಸಕ್ತ ರೈತರು ಇದೇ ದಿನಾಂಕ 20 ರೊಳಗೆ ಕೈಬರಹ ಅರ್ಜಿಯೊಂದಿಗೆ ಪಹಣಿ, ಆಧಾರ್ ಕಾರ್ಡ್, ಐಡಿ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಕೊಳವೆ ಬಾವಿ ಮತ್ತು ಬೆಳೆ ದೃಢೀಕರಣ ಪ್ರತಿಯನ್ನು ತೋಟಗಾರಿಕೆ ಇಲಾಖೆಯ ಕಚೇರಿಗೆ ಸಲ್ಲಿಸುವಂತೆ ಜಯಸಿಂಹ ತಿಳಿಸಿದ್ದಾರೆ.


ಹಾರ್ದಿಕ ಶುಭಾಶಯಗಳು



ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಬಡದಾಳ್ ಎಸ್. ನಾಗರಾಜ್ ಅವರಿಗೆ ಹಾರ್ದಿಕ ಶುಭಾಶಯಗಳು...

ಕದಂಬ ಕೇಸರಿ ಕನ್ನಡ ದಿನಪತ್ರಿಕೆ ಹಾಗೂ ಕದಂಬ ಕ್ರಾಂತಿ ಪಾಕ್ಷಿಕ ಪತ್ರಿಕೆಯ ತಂಡದಿಂದ ಮತ್ತು ರಾಜ್ ನ್ಯೂಸ್ ಸುದ್ಧಿ ವಾಹಿನಿಯ ಪರವಾಗಿ



ಸೂರ್ಯಪ್ರಕಾಶ್ ಆರ್.
ಸಂಪಾದಕರು,

ರಾಮ್ ಪ್ರಸಾದ್
ವರದಿಗಾರರು,



ಲಾಸ್ಯ ಫೌಂಡೇಷನ್, ದಾವಣಗೆರೆ.

# ಮಳೆ : ಕೊಂಬೆಗಳು ಬಿದ್ದು ಕಾರು ಜಖಂ



**ತರಳಬಾಳು ಬಡಾವಣೆಯಲ್ಲಿ ತಪ್ಪಿದ ಅನಾಹುತ !**

ದಾವಣಗೆರೆ, ಜು. 16 - ಶಿಥಿಲ ವ್ಯವಸ್ಥೆಯಲ್ಲಿದ್ದ ಬೃಹತ್ ಗಾತ್ರದ ಹಳೆಯ ಮರದ ಕೊಂಬೆಗಳು ಇದ್ದಕ್ಕಿದ್ದಂತೆ ನೆಲ ಕ್ಕುರುಳಿ ಬಿದ್ದ ಘಟನೆ ನಿನ್ನೆ ಸೋಮವಾರ ಬೆಳಿಗ್ಗೆ ನಗರದ ತರಳಬಾಳು ಬಡಾವಣೆಯಲ್ಲಿ ನಡೆದಿದೆ.

ಭಾನುವಾರ ಬೆಳಿಗ್ಗೆಯಿಂದ ರಾತ್ರಿವರೆಗೂ ಮಳೆ ಬಿಟ್ಟು ಬಿಟ್ಟು ಸುರಿದಿದೆ. ಮೊದಲೇ ಶಿಥಿಲ ವ್ಯವಸ್ಥೆಯಲ್ಲಿದ್ದ ಬೃಹತ್ ಗಾತ್ರದ ಮರ ಮಳೆಗೆ ಇನ್ನಷ್ಟು ನೆನೆದ ಪರಿಣಾಮ ಮರದ ಕೊಂಬೆಗಳು ಸೋಮವಾರ ಬೆಳಿಗ್ಗೆ ಇದ್ದಕ್ಕಿದ್ದಂತೆ ವಿದ್ಯುತ್ ಕಂಬ, ಒಂದು ಕಾರು, ಮನೆಯ ಮೇಲೆ ಬಿದ್ದಿದ್ದು, ವಿದ್ಯುತ್ ಕಡಿತಗೊಂಡು ಕಾರೊಂದು ಜಖಂಗೊಂಡಿದ್ದು, ಮನೆಯ ಗೇಟುಗಳು ಮುರಿದಿವೆ. ಅದೃಷ್ಟವಶಾತ್ ಯಾವುದೇ ರೀತಿಯ ಪ್ರಾಣ ಹಾನಿ ಸಂಭವಿಸಿಲ್ಲ.

ತರಳಬಾಳು ಬಡಾವಣೆ ಜನನಿಬಿಡ ಪ್ರದೇಶ ವಾಗಿದ್ದು, ಶಾಲೆಗೆ ಹೋಗುವ ಮಕ್ಕಳು, ಹಿರಿಯರು ಓಡಾಡುತ್ತಿ ರುತ್ತಾರೆ. ತುಂಬಾ ಹಳೆಯ ಮರಗಳಾ ಗಿದ್ದು, ಸಾಕಷ್ಟು ಬಾರಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮರಗಳನ್ನು ತೆರವು ಗೊಳಿಸುವಂತೆ ಮನವಿ ಮಾಡಿದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ.

ಈಗ ಇದ್ದಕ್ಕಿದ್ದಂತೆ ಮರಗಳ ಕೊಂಬೆಗಳು ಮುರಿದು ಬಿದ್ದಿವೆ. ಯಾರಾದರೂ ಮಕ್ಕಳ ಮೇಲೆ ಅಥವಾ ಹಿರಿಯರ ಮೇಲೆ ಬಿದ್ದಿದ್ದರೆ ಏನು ಗತಿ ಎಂದು ಆತಂಕವನ್ನು ವ್ಯಕ್ತಪಡಿಸಿರುವ ಸ್ಥಳೀಯ ನಿವಾಸಿ, ನಿವೃತ್ತ ಪ್ರಾಚಾರ್ಯರಾದ ದೇವೇಂದ್ರಪ್ಪ ಅವರು, ಇನ್ನೆರಡು ಶಿಥಿಲ ವ್ಯವಸ್ಥೆಯಲ್ಲಿರುವ ಹಳೆಯ ಮರಗಳಿದ್ದು, ಅಧಿಕಾರಿಗಳು ಆದಷ್ಟು ಬೇಗ ತೆರವುಗೊಳಿಸಿ ಮುಂದಾಗುವ ಅನಾಹುತಗಳನ್ನು ತಪ್ಪಿಸಬೇಕು ಎಂದು ಮನವಿ ಮಾಡಿದ್ದಾರೆ.

# ಬಿಐಇಟಿ ರಸ್ತೆ ಬಳಿ ಕಾರು ಅಪಘಾತ: ದೂರು

ದಾವಣಗೆರೆ, ಜು. 16- ನಗರದ ಶಾಮನೂರು ರಸ್ತೆ ಬಿಐಇಟಿ ಕಾಲೇಜು ಬಳಿ ಭಾನುವಾರ ರಾತ್ರಿ ಕಾರು ಅಪಘಾತ ನಡೆದಿದ್ದು, ರಾಣೇಬೆನ್ನೂರು ನಗರದ ನಿಶ್ಚಲ್ ಎಸ್. (24) ವಿರುದ್ಧ ದಕ್ಷಿಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳಾದ ನಾನು ಹಾಗೂ ಸಹಪಾಠಿಗಳಾದ ಸಂಜಯ್, ಸಂದೀಪ್, ಮೊಹ್ಮದ್ ಫೈಜ್, ಹಾಗೂ ಹಿರಿಯ ವಿದ್ಯಾರ್ಥಿ ನಿಶ್ಚಲ್ ಐವರು ಟೊಯೋಟಾ ಇನ್ನೋವಾ ಕಾರ್‌ನಲ್ಲಿ ಊಟಕ್ಕೆಂದು ಬನಶಂಕರಿ ಬಡಾವಣೆ ಬಳಿಯ ಹೋಟೆಲ್‌ಗೆ ಹೋಗಿದ್ದೆವು.

ಊಟ ಮಾಡಿಕೊಂಡು ರಾತ್ರಿ 1 ಗಂಟೆ ಸಮಯದಲ್ಲಿ ಕಾರು ಚಲಾಯಿಸುತ್ತಿದ್ದ ನಿಶ್ಚಲ್, ಬಿಐಇಟಿ ಕಾಲೇಜು ಹತ್ತಿರ, ಶಾಮನೂರು ರಸ್ತೆಯಲ್ಲಿ ಕಾರನ್ನು ವೇಗವಾಗಿ ಅಜಾಗರೂಕತೆಯಿಂದ ಚಲಾಯಿಸಿದ ಪರಿಣಾಮ ನಿಯಂತ್ರಣ ತಪ್ಪಿ ರಸ್ತೆ ಮಧ್ಯದಲ್ಲಿನ ಡಿವೈಡರ್‌ಗೆ ಡಿಕ್ಕಿಯಾಗಿ ಪಲ್ಟಿಯಾಗಿದೆ. ಈ ವೇಳೆ ಕಾರಿನ ಹಿಂಬದಿಯಲ್ಲಿ ಕುಳಿತಿದ್ದ ಸಂಜಯ್ ತಲೆ, ಎದೆ, ಎಡಗೈ, ಬಲಭುಜ, ಕಿವಿ ಹಾಗೂ ಬೆನ್ನಿಗೆ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ. ಕಾರನ್ನು ಚಲಾಯಿಸುತ್ತಿದ್ದ ನಿಶ್ಚಲ್‌ಗೆಗೆ ಮೈಕೈಗೆ ಪೆಟ್ಟು ಬಿದ್ದು ಗಾಯಗಳಾಗಿವೆ. ಕಾರಿನ ಮಧ್ಯದ ಸೀಟಿನಲ್ಲಿ ಬಲಗಡೆ ಸೀಟಿನಲ್ಲಿ ಕುಳಿತಿದ್ದ ಮೊಹ್ಮದ್ ಫೈಜಾನನಗೆ ಯಾವುದೇ ಗಾಯಗಳಾಗಿಲ್ಲ.

ಅಪಘಾತ ಸ್ಥಳಕ್ಕೆ ಬಂದ ಆಂಬ್ಯುಲೆನ್ಸ್‌ನಲ್ಲಿ ಗಾಯಗೊಂಡಿದ್ದ ಸಂಜಯ್ ಮತ್ತು ಸುದೀಪ್ ಅವರನ್ನು ಬಾಪೂಜಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆವು. ಸಂಜಯ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಎಸ್.ಎಸ್.ಐಎಂ ಆಸ್ಪತ್ರೆಗೆ ದಾಖಲಿಸಲಾಯಿತು.

ಕಾರು ಅಪಘಾತಕ್ಕೆ ಕಾರಣರಾದ ನಿಶ್ಚಲ್ ವಿರುದ್ಧ ಕ್ರಮ ಜರುಗಿಸುವಂತೆ ಶಿವಮೊಗ್ಗ ಜಿಲ್ಲೆ ಹೊಸ ನಗರ ತಾಲ್ಲೂಕು ರಿಪ್ಪನ್ ಪೇಟೆ ವಾಸಿ ಯತೀಶ್ ಹೆಚ್.ಸರಾಫ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

# ಮತದಾರರಿಗೆ ಆಮಿಷ; ಉಪಸಭಾಪತಿ ರುದ್ರಪ್ಪ ಲಮಾಣಿ ವಿರುದ್ಧ ಎಫ್‌ಐಆರ್



ರಾಣೇಬೆನ್ನೂರು, ಜು.16- 2023ರ ವಿಧಾನಸಭೆ ಚುನಾವಣೆಗೆ ನಾಮಪತ್ರ ಸಲ್ಲಿಕೆ ಸಮಯದಲ್ಲಿ ನಡೆಸಿದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರಿಗೆ ಸಾವಿರಕ್ಕೂ ಅಧಿಕ ಟಿ-ಶರ್ಟ್ ನೀಡಿ, ನೀತಿ ಸಂಹಿತೆ ಉಲ್ಲಂಘನೆ ಮಾಡಿದ್ದ ಆರೋಪದಡಿ ಶಾಸಕ, ಇಂದಿನ ಉಪಸಭಾಪತಿ ರುದ್ರಪ್ಪ ಲಮಾಣಿ ವಿರುದ್ಧ ಹಾವೇರಿ ಶಹರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮತದಾರರಿಗೆ, ಕಾರ್ಯಕರ್ತರಿಗೆ ಟಿ-ಶರ್ಟ್ ನೀಡಿ ತಮ್ಮ ಪರವಾಗಿ ಮತ ಚಲಾಯಿಸುವ ಆಮಿಷ ವೊಡ್ಡಿದ್ದರು ಎಂದು ಚುನಾವಣಾ ವೇಳೆ ವಿಚಕ್ಷಣಾ ದಳದ ಅಧಿಕಾರಿಯಾಗಿದ್ದ ವಸೀಂ ಮಿರ್ಚಿ ಅವರು ನೀಡಿದ್ದ ದೂರಿನನ್ವಯ ಎಫ್ ಐ ಆರ್ ದಾಖಲಿಸಲಾಗಿದ್ದು, ತನಿಖೆ ನಡೆದಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

# ಷೇರು ಲಾಭದ ಆಸೆ ತೋರಿಸಿ 20.45 ಲಕ್ಷ ರೂ. ವಂಚನೆ

ದಾವಣಗೆರೆ, ಜು. 16- ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚು ಲಾಭ ಗಳಿಸಬಹುದು ಎಂದು ಆಸೆ ತೋರಿಸಿ ವ್ಯಕ್ತಿಯೊಬ್ಬರಿಗೆ 20.45 ಲಕ್ಷ ರೂ.ಗಳನ್ನು ವಂಚಿಸಿರುವ ಘಟನೆ ನಡೆದಿದೆ.

ಹರಿಹರ ಕೇಶವನಗರದ ಸತೀಶ್ ಅವರಿಗೆ ಅಪರಿಚಿತರು ವಾಟ್ಸಾಪ್ ಮೂಲಕ ಪರಿಚಯಿಸಿಕೊಂಡು ಷೇರು ಮಾರುಕಟ್ಟೆಗೆ ಸಂಬಂಧಿಸಿದ ಗ್ರೂಪ್‌ನಲ್ಲಿ ಸೇರಿಸಿಕೊಂಡು, ಷೇರು ಖರೀದಿಸಿ ಮಾರಾಟ ಮಾಡಿ ಲಾಭ ಮಾಡಿಕೊಳ್ಳಬಹುದು ಎಂದು ಹೇಳಿ ಹಂತ ಹಂತವಾಗಿ ಒಟ್ಟು 20,45,443 ರೂ.ಗಳನ್ನು ಖಾತೆಗೆ ವರ್ಗಾಯಿಸಿಕೊಂಡು ವಂಚಿಸಿದ್ದಾರೆ. ಈ ಕುರಿತು ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.


## ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,

ಪ್ರಧಾನ ಕಛೇರಿ, #165/1-2, ಶ್ರೀ ವಾಸವಿ ರಸ್ತೆ, 3ನೇ ಮೇನ್,
ಪಿ.ಜೆ. ಬಡಾವಣೆ, ದಾವಣಗೆರೆ-02.

**ಪ್ರಕಟಣೆ**

**ಸದಸ್ಯ ಬಾಂಧವರ ಗಮನಕ್ಕೆ :**

ದಿನಾಂಕ : 13.07.2024ರ ಶನಿವಾರದಂದು ನಡೆದ ಬ್ಯಾಂಕಿನ 58ನೇ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯಬಾಂಧವರ ಅಭಿಪ್ರಾಯ ಮತ್ತು ಒತ್ತಾಸೆ ಮೇರೆಗೆ, 2023-24ನೇ ಸಾಲಿಗೆ ಶೇ.20 ರಷ್ಟು ಲಾಭಾಂಶವನ್ನು (ಡಿವಿಡೆಂಡ್) ಆಡಳಿತ ಮಂಡಳಿ ಘೋಷಿಸಿದ ದರದಲ್ಲಿ ಡಿವಿಡೆಂಡ್ ಮೊತ್ತವನ್ನು ದಿನಾಂಕ : 16.07.2024 ರಂದು ಸದಸ್ಯರ ಉಳಿತಾಯ ಖಾತೆಗಳಿಗೆ ಜಮಾ ಮಾಡಲಾಗಿದೆ ಎಂದು ಸಂತೋಷದಿಂದ ತಿಳಿಯಪಡಿಸುತ್ತೇವೆ.

ದಿನಾಂಕ : 16.07.2024

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/-
(ಪಡಗಲ್ ಪ್ರಶಾಂತ್) ಪ್ರಧಾನ ವ್ಯವಸ್ಥಾಪಕರು

**ಅಂತಿಮ ಸೂಚನೆ :**

ಸದಸ್ಯರ ಉಳಿತಾಯ ಖಾತೆಗೆ ಡಿವಿಡೆಂಡ್ ಜಮಾ ಆಗದೇ ಇದ್ದಲ್ಲಿ ಮತ್ತು ಸದಸ್ಯ ಬಾಂಧವರು 2019-20, 2020-21, 2021-22 ಮತ್ತು 2022-23ನೇ ಸಾಲಿನಲ್ಲಿ ಡಿವಿಡೆಂಡ್ ಪಡೆಯದೇ ಇರುವ ಸದಸ್ಯರ ಡಿವಿಡೆಂಡ್ ಮೊತ್ತವನ್ನು ಬ್ಯಾಂಕಿನ ಉಪವಿಧಿಗಳ ಅನ್ವಯ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಿಕೊಳ್ಳಲಾಗುವುದು. ಪ್ರಯುಕ್ತ ಸದಸ್ಯ ಬಾಂಧವರು ದಿನಾಂಕ 31.08.2024 ರ ಒಳಗೆ ತಮ್ಮ ಡಿವಿಡೆಂಡ್ ಹಣವನ್ನು ಪಡೆಯಲು ವಿನಂತಿಸಲಾಗಿದೆ.


## ಇಂದಿನಿಂದ ಉತ್ಸವಾಂಬ ದೇವಿಗೆ ಮಂಡಲಾಭಿಷೇಕ



ವಸಂತ ರಸ್ತೆಯ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದ ಲ್ಲಿರುವ ಶ್ರೀ ಉತ್ಸವಾಂಬ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ದೇವಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳು 12ನೇ ವರ್ಷದ ಮಹಾ ಮಂಡಲಾಭಿಷೇಕವು ಇಂದಿನಿಂದ ಬರುವ ಸೆಪ್ಟೆಂಬರ್ 3ರ ಮಂಗಳವಾರದವರೆಗೆ ನಡೆಯಲಿದೆ.

48 ದಿನಗಳ ಕಾಲ ತಾಯಿಯವರಿಗೆ ಸರ್ವ ಭಕ್ತಾದಿಗಳಿಂದ ಮಹಾ ಅಭಿಷೇಕ ಇರುತ್ತದೆ. ಕೊನೆಯ ದಿನದಂದು ಬೆಳಗಿನ ಜಾವ ಅಮ್ಮನವರಿಗೆ ಮಹಾ ಪೂಜೆ ಮತ್ತು ಮಧ್ಯಾಹ್ನ 12.30 ಕ್ಕೆ ಪ್ರಸಾದ ವಿನಿಯೋಗವಿರುತ್ತದೆ.

## ಮಲೇಬೆನ್ನೂರು ಪುರಸಭೆ ಸಿಓ ಆಗಿ ಭಜಕ್ಕನವರ್



ಮಲೇಬೆನ್ನೂರು, ಜು. 16- ಇಲ್ಲಿನ ಪುರಸಭೆಯ ನೂತನ ಮುಖ್ಯಾಧಿಕಾರಿಯಾಗಿ ಹನುಮಂತಪ್ಪ ಭಜಕ್ಕನವರ್ ಅವರು ನಿರ್ಗಮಿತ ಮುಖ್ಯಾಧಿಕಾರಿ ಎ. ಸುರೇಶ್ ಅವರಿಂದ ಅಧಿಕಾರ ಸ್ವೀಕರಿಸಿದರು.

## ತಬಸ್ಸುಮ್‌ಗೆ 6ನೇ ರ್‍ಯಾಂಕ್



ಚಿತ್ರದುರ್ಗ, ಜು.16- ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಮೇ 2024ರ ಅಂತಿಮ ವರ್ಷದ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ನಗರದ ಎಸ್.ಜೆ.ಎಂ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿನಿ ಆರ್. ಸಾನಿಯಾ ತಬಸ್ಸುಮ್ ಅವರು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ರಾಜ್ಯಕ್ಕೆ 6ನೇ ರ್‍ಯಾಂಕ್ ಗಳಿಸಿದ್ದಾರೆ.

**ಭದ್ರಾ ಜಲಾಶಯ**



ನೀರಿನ ಮಟ್ಟ : 144 ಅಡಿ 7 ಇಂಚು
ಒಳ ಹರಿವು : 27839 ಕ್ಯೂಸೆಕ್ಸ್
ಹೊರ ಹರಿವು : 166 ಕ್ಯೂಸೆಕ್ಸ್
ಕಳೆದ ವರ್ಷ : 141 ಅಡಿ 3 ಇಂಚು


**ಅಭಿನಂದನೆಗಳು**



ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾದ ದಾವಣಗೆರೆ ಜಿಲ್ಲಾ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ
**ಶ್ರೀ ಐಗೂರು ಸಿ. ಚಂದ್ರಶೇಖರ್**
ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.



ಎಂ.ಎಚ್. ಪವನ್, ಐಗೂರು
ಗಿರೀಶ್ ಹೆಚ್.ಎನ್., ಗಾನವಿ ಎಂಟರ್‌ಪ್ರೈಸಸ್, ಶಾಮನೂರು
ಸಿ.ಜೆ. ಪ್ರಕಾಶ್, ಐಗೂರು





SOUTH INDIA OPTICALS
Near Ram & Co Circle, Beside Bank of Baroda, P.J. Extension, Davanagere ✆ 08192-231432 • 08192-462073



॥ ಶ್ರೀ ಸಿದ್ಧರಾಮೇಶ್ವರ ಸ್ವಾಮಿ ಪ್ರಸನ್ನ ॥

**ಶ್ರೀಮತಿ ಶಾಂತಮ್ಮ ಚಂದಪ್ಪ ಮತ್ತು ಮಕ್ಕಳು**
ಅರಳೀಕಟ್ಟೆ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
ಇವರು ಮಾಡುವ ವಿಜ್ಞಾಪನೆಗಳು

**ವಿವಾಹ ಆರತಕ್ಷತೆ**

(ದಾವಣಗೆರೆ ಸಿಟಿ, ತರಳಬಾಳು ಬಡಾವಣೆ ವಾಸಿ)
ಶ್ರೀಮತಿ ಅಂಬುಜಾ ಶ್ರೀ ಎ.ಸಿ.ಬಸವರಾಜ್ ಇವರ ಸುಪುತ್ರ
**ಚಿ॥ ರಾ॥ ಎ.ಬಿ.ಶಿವರಾಜ್** B.E., M.B.A. (London)
**ಚಿ॥ ಕು॥ ಸೌ॥ ಯು.ಮೇಘನಾ** B.E.
(ದಾವಣಗೆರೆ ಸಿಟಿ, ತರಳಬಾಳು ಬಡಾವಣೆ ವಾಸಿ)
ಶ್ರೀಮತಿ ಜಿ.ಟಿ.ವೀಣಾ ಶ್ರೀ ಎಂ.ಉಮಾಪತಿ ಇವರ ಸುಪುತ್ರಿ

ದಿನಾಂಕ: 17-07-2024ನೇ ಬುಧವಾರ ಸಂಜೆ 6.30 ಗಂಟೆಗೆ
ಸ್ಥಳ: ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶಾಮನೂರು ರಸ್ತೆ, ದಾವಣಗೆರೆ.

**ವಿಶೇಷ ಆಹ್ವಾನಿತರು**

**ಶ್ರೀಮತಿ ಗಾಯಿತ್ರಿ ಮತ್ತು ಶ್ರೀ ಜಿ.ಎಂ. ಸಿದ್ದೇಶ್ವರ,** ಮಾಜಿ ಕೇಂದ್ರ ಸಚಿವರು.



ಶ್ರೀ ಎ.ಸಿ. ಬಸವರಾಜ್, ದಾವಣಗೆರೆ
ಶ್ರೀ ಎ.ಬಿ ಭರತ್, ದಾವಣಗೆರೆ
ತಮ್ಮ ಆಗಮನಾಭಿಲಾಷಿಗಳು
ಶ್ರೀ ಸಿ. ಗುರುಶಾಂತಪ್ಪ, ಮಾಜಿ ಗ್ರಾ.ಪಂ.ಸದಸ್ಯರು, ಅರಳಿಕಟ್ಟೆ.

ಶ್ರೀಮತಿ ಕೆ.ವಿ. ಅನಸೂಯ ಮತ್ತು ಶ್ರೀ ಸಿ. ಗುರುಶಾಂತಪ್ಪ, ಮಾಜಿ ಗ್ರಾ.ಪಂ. ಸದಸ್ಯರು, ಅರಳೀಕಟ್ಟೆ.
ಶ್ರೀಮತಿ ಅಂಬುಜಾ ಮತ್ತು ಶ್ರೀ ಎ.ಸಿ.ಬಸವರಾಜ್, ದಾವಣಗೆರೆ.
ಶ್ರೀಮತಿ ಎ.ಜಿ.ಶಿಲ್ಪಾ M.Sc.(Ag) ಶ್ರೀ ಡಾ॥ ಎಸ್.ಬಿ.ಯೋಗೀಶ್, M.A., Phd., K.A.S., (ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಿಕ್ಕಮಗಳೂರು)
ಶ್ರೀಮತಿ ಡಾ॥ ಎ.ಜಿ.ಶೀಲಾ, M.B.B.S.(MD) ಶ್ರೀ ಡಾ॥ ಸಂತೋಷ್ ವಿ.ಜಿ, M.B.B.S. M.D., ದಾವಣಗೆರೆ.
ಶ್ರೀಮತಿ ಎ.ಜಿ.ಶೈಲಜಾ, B.E., M.B.A. ಶ್ರೀ ಚಿಂತನ್ ಪಾಟೀಲ್ B.E., M.Tech. ದಾವಣಗೆರೆ.
ಚಿ॥ ಎ.ಬಿ. ಭರತ್, B.B.A., M.B.A. (London).
ಪುಟಾಣಿಗಳಾದ ಎಸ್.ವೈ. ರಿಧಿ, ಎಸ್.ವೈ. ರಿಯಾನ್ಸ್
ಚಂದಪ್ಪರ ವಂಶಸ್ಥರು, ಅರಳೀಕಟ್ಟೆ ಗ್ರಾಮಸ್ತರು ಮತ್ತು ಬಂಧು ಮಿತ್ರರು.



**ಕ್ಷಿಪ್ರವಾಗಿ (FAST) ಕಾರ್ಯ ಪ್ರವೃತ್ತರಾಗಿ ಪಾರ್ಶ್ವವಾಯುಗೆ ತುತ್ತಾದ ಸಂದರ್ಭದಲ್ಲಿ**

F (Face) ಮುಖ ಜೋಲು ಬೀಳುವುದು (ಮರಗಟ್ಟುವಿಕೆ)
A (Arm) ತೋಳು ಶಕ್ತಿ ಹೀನತೆ
S (Speech) ಮಾತನಾಡಲು ತೊಂದರೆ
T (Time) ಆಂಬ್ಯುಲೆನ್ಸ್ ಅನ್ನು ಕರೆಯುವ ಸಮಯ



ಸ್ಟ್ರೋಕ್ ಪ್ರಾರಂಭಿಕ 4 ½ ಗಂಟೆಯೊಳಗೆ ಥ್ರಂಬೋಲಿಸಿಸ್ ಚಿಕಿತ್ಸೆ ನೀಡಿದರೆ ಶಾಶ್ವತ ಅಂಗವೈಕಲ್ಯವನ್ನು ತಡೆಗಟ್ಟಲು ಸಾಧ್ಯ.

ನರ ರೋಗಕ್ಕೆ ಸಂಬಂಧಿಸಿದ ತುರ್ತು ಸಮಯದಲ್ಲಿ ನಿಮ್ಮ ಉತ್ತಮ ಭರವಸೆ ನಂಜಪ್ಪ

ಕರೆ ಮಾಡಿ
08182-268000 | 08192-260111

ಕುವೆಂಪು ರಸ್ತೆ, ಶಿವಮೊಗ್ಗ
ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ
ನಂಜಪ್ಪ ಹಾಸ್ಪಿಟಲ್ ಶಿವಮೊಗ್ಗ
ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ



**ಶಿವಪ್ರಕಾಶ್ ಜಿ.ಬಿ. ನಿಧನ**



ಜನನ : 26-09-1970
ಮರಣ : 16-07-2024

ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಶಾಮನೂರು ರಸ್ತೆ, ಬೂಸ್ನೂರು ಪ್ರಿಂಟರ್ಸ್ ಹಿಂಭಾಗ, ಡೋರ್ ನಂ. 1955/8-9ರ ವಾಸಿ

**ಶ್ರೀ ಶಿವಪ್ರಕಾಶ್ ಜಿ.ಬಿ.**
ಲೆಕ್ಕ ಪರಿಶೋಧಕರು, ಶಿವಪ್ರಕಾಶ್ & ಅಸೋಸಿಯೇಟ್ಸ್

ಇವರು ದಿನಾಂಕ 16-7-2024ರ ಮಂಗಳವಾರ ಸಂಜೆ 4.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 53 ವರ್ಷ ವಯಸ್ಸಾಗಿತ್ತು, ಪತ್ನಿ, ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17-07-2024ರ ಬುಧವಾರ ಮಧ್ಯಾಹ್ನ 12-00ಗಂಟೆಗೆ ಮೃತರ ಸ್ವಗ್ರಾಮ ಹಾಲಿವಾಣ, ಹರಿಹರ ತಾ॥, ಇಲ್ಲಿ ನೆರವೇರಿಸಲಾಗುವುದು.

ಬೆಳಿಗ್ಗೆ 9.30ರವರೆಗೆ ಮೃತರ ಸ್ವಗೃಹದಲ್ಲಿ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಏರ್ಪಡಿಸಲಾಗಿದೆ.

**ಶಿವಪ್ರಕಾಶ್ & ಅಸೋಸಿಯೇಟ್ಸ್ ಸಿಬ್ಬಂದಿ ವರ್ಗ**
# 8/5, ಮೊದಲನೇ ಮಹಡಿ, ಎ.ವಿ.ಕೆ. ಕಾಲೇಜು ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ : 63605 91084


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas